ಅಪರಂಜಿ



ನಗೆಯ ಕಾರಂಜಿ

ಈ ಸಂಚಿಕೆಯ ಲೇಖಕರು........

ಡಾ॥ ಕೆ. ಕೃಷ್ಣಮೂರ್ತಿ □ ಆನಂದ್ □

ಪೀಪಿ □

ಜೀಡಿ □ ಮ್ಯ. ಶಿ. □

ಅ.ರಾ.ಸೇ. □ ಅಪ ಹಾಸ್ಯಗಾರ್ □

ಶ್ರೀಮತಿ ಲೀಲಾ ಮಿರ್ಲೆ □ ಕೇಫ. □

ಜನ್ಮದಿನೋತ್ಸವ ಸಂಚಿಕೆ

ಅ ಪ ರಂ ಜಿ

ಗೌರವ ಸಲಹೆಗಾರರು

ಶ್ರೀ ಅ.ರಾ ಸೇ.
ಶ್ರೀ ಶಿವಕುಮಾರ್

ಪ್ರಕಾಶಕರು ಮತ್ತು ಸಂಪಾದಕರು

ಶ್ರೀ ಶೇಷಗಿರಿ

ವಾರ್ಷಿಕ ಚಂದಾ : ರೂ. 25.00

ಮ ನ ವಿ

ಅಪರಂಜಿಗೆ ಒಂದು ವರ್ಷ ತುಂಬಿದೆ. ಎಲ್ಲಾ ಅಭಿಮಾನಿಗಳೂ ತಮ್ಮ ಚಂದಾ ಹಣವನ್ನು ಮನಿ ಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕೆಳಕಂಡ ವಿಳಾಸಕ್ಕೆ ಈ ಕೂಡಲೇ ಕಳಿಸಲು ಪ್ರಾರ್ಥನೆ. ಒಂದು ವರ್ಷದ ಸಾಧನೆಯ ಬಗೆಗೆ ನಿಮ್ಮ ಅನಿಸಿಕೆಗಳನ್ನು ತಿಳಿಸಿ. ಜಾಹಿರಾತು ಕೊಡಿ. ಹೊಸ ಚಂದಾದಾರರನ್ನು ಕೊಡಿ. ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಿ. ಅಪರಂಜಿ ನಿಮ್ಮದು. ನಿಮ್ಮ ಅಭಿಮಾನವೇ ಅದರ ಬಂಡವಾಳ.

ಚೆಕ್ಕುಗಳನ್ನು "ಅಪರಂಜಿ" ಹೆಸರಿಗೆ ಕಳುಹಿಸಬಹುದು

ಅಪರಂಜಿ ಕಾರ್ಯಾಲಯ,
36, ಆರನೇ ಮುಖ್ಯ ರಸ್ತೆ,
ಮಲ್ಲೇಶ್ವರ,
ಬೆಂಗಳೂರು–560 003.

ಶೇಷಗಿರಿ,
ಸಂಪಾದಕ.

ಈ ಸಂಚಿಕೆಯಲ್ಲಿ ... ...

ವ್ಯಂಗ್ಯ ಚಿತ್ರಗಳು—ರವಿರಾಜ ಹಾಲಂಬಿ

ಮುದ್ರಣ : ಬೃಂದಾವನ್ ಮುದ್ರಣಾಲಯ, ಬೆಂಗಳೂರು–11

ಅಪರಂಜಿ

ಸಂಪುಟ–೨ ಅಕ್ಟೋಬರ್ ೮೪ ಸಂಚಿಕೆ–೧

ಯಾವುದು ಭೂಮವೋ ಅದು ಸುಖವು. ಅಲ್ಪದಲ್ಲಿ ಸುಖವಿಲ್ಲ............ ಯಾವುದು ಭೂಮವೋ ಅದು ಅಮೃತವು. ಯಾವುದು ಅಲ್ಪವೋ ಅದು ಮರ್ತ್ಯವು.

—ಛಾಂದೋಗ್ಯ

ಅಪರಂಜಿ ಎರಡನೆಯ ವರ್ಷದಲ್ಲಿ ಕಾಲಿಟ್ಟಿದ್ದಾಳೆ.

ಅಪರಂಜಿ, ಅಪರಂಜಿಯಾಗಿಲ್ಲವೆಂದು ಕೆಲವರು ಅಭಿಮಾನಿಗಳು ನಿರಾಶೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಹಲವು ಹಾಸ್ಯರಸಿಕರು ಅಪರಂಜಿಯನ್ನು ಬಹಳವಾಗಿ ಪ್ರಶಂಸೆ ಮಾಡಿದ್ದಾರೆ. ನಿರೀಕ್ಷಿತ ಗುಣಮಟ್ಟಕ್ಕೆ ಅಪರಂಜಿ ಏರಲಿಲ್ಲವೆಂಬ ಅಭಿಮಾನಿಗಳ ದೂರು ಹೊಸ ಸಾಧನೆಗಳಿಗೆ ಪ್ರೇರಕವಾಗಿದೆ. ಭಿನ್ನ ಅಭಿರುಚಿಗಳಿಗೆ, ವಿಭಿನ್ನ ರೀತಿಯ ಹೊಸ ಪ್ರಯೋಗಗಳು ಅಗತ್ಯ. ಅಂತಹ ಸಾರ್ಥಕ ಯತ್ನಗಳನ್ನು ಅಪರಂಜಿ ಸದಾ ಸ್ವಾಗತಿಸುತ್ತದೆ.

ಕನ್ನಡ ನಗೆಗಾರರಲ್ಲಿ ಒಂದು ಸವಿನಯ ಬಿನ್ನಹ. ಹೊಸತನ್ನು ಸೃಷ್ಟಿಸಿ, ಕ್ಷೋಭೆ, ಅಶಾಂತಿಗಳ ಹಾವಳಿಯಿಂದ ಬೆಂದ ಮನಗಳಿಗೆ ನಗೆಯ ಕಾಯಕಲ್ಪವನ್ನು ನೀಡಿ.

ತನ್ನೆಲ್ಲ ಲೇಖಕರು, ಜಾಹೀರಾತುದಾರರು, ವ್ಯಂಗ್ಯಚಿತ್ರಕಾರರು, ಚಂದಾದಾರರು, ಮುದ್ರಣಕಾರರು ಮತ್ತು ಅಭಿಮಾನಿಗಳಿಗೆ ಅಪರಂಜಿಯ ಕೃತಜ್ಞತೆಗಳು.

ಹೊಸ ಹುರುಪಿನಿಂದ, ಹೊಸ ದಾರಿಯಲ್ಲಿ ಹೊಸ ದಿಗಂತಗಳತ್ತ ಅಪರಂಜಿ ನಗುನಗುತ್ತಾ ಹೆಜ್ಜೆಯಿಡುತ್ತಿದ್ದಾಳೆ.

—ಸಂಪಾದಕ

ಸಾಮಗಾಯನ ಪೂತಂಮೇನೋಚ್ಛಿಷ್ಟಮಧರಂ ಕುರು
ಉತ್ಕಂಠಿತಾಸಿ ಚೇದ್ಭದ್ರೇ, ವಾಮಕರ್ಣಂ ದಶಸ್ವಮೇ

—"ತರುಣಿ, ನನ್ನ ತುಟಿ ಸಾಮಗಾನದಿಂದ ಪವಿತ್ರವಾಗಿದೆ. ಅದನ್ನು ಕಚ್ಚಿ ಎಂಜಲು ಮಾಡಬೇಡ. ನಿನಗೆ ಅಷ್ಟು ಆತುರವಿದ್ದರೆ ನನ್ನ ಎಡಗಿವಿಯನ್ನು ಕಚ್ಚು".

ಒಂದು (ನಕಲಿ) ಸಂಸ್ಕೃತ ಶ್ಲೋಕ

ಈಶ್ವರೋ ಕಾಷ್ಟಭಾರಂಚ ಕುಬೇರಂಚ ದರಿದ್ರತಃ
ಸಂಜೀವೇನ ಮೃತಂಶ್ಚೈವ ಪುನಃಕಾಚಯ ಪೂಚಯ

(ಅನಾಮಿಕ)

—ಕಾಚಯ್ಯ, ಪೂಚಯ್ಯ ಎಂಬ ಸಿರಿವಂತ ಸಹೋದರರಿಬ್ಬರು ತಮ್ಮ ಹೆಸರಿಗೆ ಬೇಸತ್ತು ಬೇರೆ ಊರಿಗೆ ಹೋಗಿ ದೊಡ್ಡೀಶ್ವರಪ್ಪ, ಸಣ್ಣೀಶ್ವರಪ್ಪ ಎಂಬ ಹೆಸರಿಟ್ಟು ಕೊಂಡರು. ಆ ಊರಿನಲ್ಲಿದ್ದ ಈಶ್ವರ ಕಟ್ಟಿಗೆ ಹೊರೆ ಹೊರುತ್ತಿದ್ದ. ಮತ್ತೊಂದೂರಿಗೆ ಹೋಗಿ ದೊಡ್ಡಕುಬೇರ, ಸಣ್ಣಕುಬೇರ ಎಂಬ ಹೆಸರು ಇಟ್ಟುಕೊಂಡಿದ್ದರು. ಅಲ್ಲಿದ್ದ ಕುಬೇರ ದಟ್ಟದರಿದ್ರ. ಮುಂದಿನೂರಿಗೆ ಹೋಗಿ ದೊಡ್ಡ ಸಂಜೀವ, ಸಣ್ಣ ಸಂಜೀವ ಎಂದು ಹೆಸರಿಟ್ಟುಕೊಂಡರು. ಆ ಊರಿನಲ್ಲಿದ್ದ ಸಂಜೀವ ಕೆಲ ದಿನಗಳಲ್ಲೇ ದಿವಂಗತನಾದ.

ಅವರಿಬ್ಬರೂ ಮೊದಲಿದ್ದ ಊರಿಗೇ ಬಂದು ಮೊದಲಿದ್ದ ಹೆಸರುಗಳನ್ನೇ ಇಟ್ಟುಕೊಂಡರು.

(ಜಾನಪದ ಕತೆ ಹಾಗೂ ಶ್ಲೋಕ)

'ಅರ್ಧ ಸತ್ಯ' ಎಂಬ ಹಿಂದಿ ಚಿತ್ರ ಮಾಸ್ಕೋದಲ್ಲಿ ಜನಪ್ರಿಯವಾಯಿತಂತೆ

—ಸುದ್ದಿ

ರಷ್ಯನರಿಗೆ ಈ ಶೀರ್ಷಿಕೆಯೇ ಇಷ್ಟವೇನೋ ?

★

ಕಸ್ಟಂಸ್ ಅಧಿಕಾರಿಗಳ ಕಿರುಕುಳಕ್ಕೆ ಬೆದರಿ, ಭಾರತದ ತಂಡ ಯಾವ ಒಲಂಪಿಕ್ ಪದಕವನ್ನೂ ತರಲಿಲ್ಲವಂತೆ.

★

ಕೇಂದ್ರ ಮಂತ್ರಿ ಮಂಡಲದಲ್ಲಿ 'ಹೈಜಾಕ್' ಖಾತೆಯೊಂದನ್ನು ತೆಗೆಯಬಾರದೇಕೇ ?

★

ಅಂಚೆ ನೌಕರರಿಂದ ಮುಷ್ಕರ

—ಪತ್ರಿಕೆ

ಅರೆ, ನಮಗೆ ಗೊತ್ತಾಗಲೇ ಇಲ್ಲವಲ್ಲ !

★

ಸರಕಾರವೇ ಇಲ್ಲದಿರುವುದಕ್ಕಿಂತ, ಕೈಗೊಂಬೆ ಸರಕಾರ ಎಷ್ಟೋ ವಾಸಿ

—ಶ್ರೀ ಭಾಸ್ಕರರಾವ್

ಕೈಗೊಂಬೆ ಇಷ್ಟೆಲ್ಲ ಮಾತಾಡುತ್ತಲ್ಲ !

★

ಇನ್ನು ಮುಂದೆ ರಾಮಲೀಲಾ ಸಮಾರಂಭವನ್ನು ಹೈದರಾಬಾದಿನಲ್ಲೇ ಏರ್ಪಡಿಸಬಾರದೇಕೆ ?

★

ಮಹಿಳಾ ಕಾಂಗ್ರೆಸ್ ; ಹಲವು ಅತಿಥಿಗಳು ಮಾನಸಿಕ ಆಸ್ಪತ್ರೆಯಲ್ಲಿ ಬಿಡಾರ.

—ಸುದ್ದಿ

ಅಯ್ಯೋ ಪಾಪ !

★

ಅಣುಶಕ್ತಿ ; ಮುಖ್ಯ ಮಂತ್ರಿ–ರಾಜ್ಯಪಾಲರ ಭಿನ್ನದೃಷ್ಟಿ

—ಶೀರ್ಷಿಕೆ

ಅಣುವಿಗಿಂತ ಅಭಿಪ್ರಾಯ ವಿಭಜನೆ ಎಷ್ಟೋ ಸುಲಭ !

ಒಂದು ಲೇಶ್ಯಾಚಾರ —ಪೀಟಿ

ವಿಜಯಕಿಘೆಯ ಮೂರನೆಯ ಮಹಡಿಯಲ್ಲಿ ಅಖಿಲ ಕರ್ನಾಟಕ ವಿಫಲ ಪ್ರೇಮಿಜನ ಪರಿಷತ್ತಿನ ಅಧ್ಯಕ್ಷರು ಅನ್ಯಮನಸ್ಕರಾಗಿ ಕುಳಿತಿದ್ದರು. ಬೈರೂತ್, ಟ್ರಿಪೋಲಿ, ಇರಾನ್, ಇರಾಕ್‌ಗಳಲ್ಲಿ ಪ್ರೇಮ ಸ್ವಲ್ಪವಾದರೂ ಉಳಿದಿದೆಯೋ ಇಲ್ಲವೋ ಎಂದು ಚಿಂತಿಸುತ್ತಿದ್ದರು. ಕಾರ್ಯದರ್ಶಿ ಗಾಬರಿಯಾಗಿ ಒಳನುಗ್ಗಿ ಅವರಿಗೆ ಒಂದು ಸಿಗರೇಟುಕೊಟ್ಟು ಅದನ್ನು ಹೊತ್ತಿಸಿ, ತಾನೂ ಒಂದನ್ನು ಹೊತ್ತಿಸಿ

"ತಥಾಗತ, ಅವರು ಬಂದೇ ಬಿಟ್ಟರು !" ಎಂದ.

"ಯಾರು ?" ಅಧ್ಯಕ್ಷರು ಕೇಳಿದರು.

"ಪ್ರೇಮ ಸಂವರ್ಧಿನೀ ಸಂಘದ ಸದಸ್ಯರು."

"ಅವರನ್ನು ಲೆಬನಾನಿಗೆ ಕಳಿಸು"

ಕಾರ್ಯದರ್ಶಿ ಹೊಗೆಯುಂಗುರವನ್ನು ಅಧ್ಯಕ್ಷರ ಮುಖಕ್ಕೇಬಿಟ್ಟು

"ಈ ಸಂಪತ್ತಿಗೆ ಏಕೆ ಅಧ್ಯಕ್ಷನಾದೆ ?" ಎಂದ.

"ಅದು ನನ್ನ ತಪ್ಪಲ್ಲ" ಎಂದರು ಅಧ್ಯಕ್ಷರು.

ಮೆಟ್ಟಿಲ ಮೇಲೆ ಬೂಟುಗಾಲು ಸಪ್ಪಳಗಳು ಕೇಳಿದವು.

"ಇದು ಸಂತೇ ಮೈದಾನವಲ್ಲ, ಇವೊತ್ತು ಸಂತೆಯೂ ಇಲ್ಲ. ಇವರೇಕೆ ಬಂದರು ? ನಾನೇನೂ ಕರೆದಿಲ್ಲವಲ್ಲ ?"

"ಹೌದು, ಆದರೆ ಬೆಂದ ಹೃದಯಗಳಿಗೆ ತಂಪೆರೆಯುವ ವರಿಷ್ಠ ನೀನೊಬ್ಬನೇ ಎಂದು ಪ್ರೇಮ ಸಂವರ್ಧಿನೀ ಸಂಘ ನಂಬಿದೆ".

"ನನಗೆ ಆ ಸಂಘದಲ್ಲಿ ನಂಬಿಕೆ ಇಲ್ಲವಲ್ಲ !" ಒಬ್ಬಿಬ್ಬರು ಕೋಣೆಯೊಳಕ್ಕೆ ನುಗ್ಗಿ

"ಇಲ್ಲೇ ಎಣಿಕೆಯಾಗಲಿ." ಎಂದರು.

"ರಘುವೀರ್‌ಕೀ ಜೈ" ಎಂದು ಹೊರಗೆ ವರಾಂಡದಲ್ಲಿ ಘೋಷಣೆ. ಕಾರ್ಯದರ್ಶಿ ಅವರನ್ನು ಹೊರಗೆ ಕಳಿಸಿದ. ಕಳಿಸುವುದೇನು ದಬ್ಬಿದ.

"ಏನಿದು ರಂಪ ?" ಎಂದು ಅಧ್ಯಕ್ಷರು ಕೇಳಿದರು. ಕಾರ್ಯದರ್ಶಿ ಹೇಳಿದ :

ಈ ಊರಿನ ಹೊಸ ವಿಸ್ತರಣದಲ್ಲಿ ಪ್ರಕಾಶರಾವು ಅಂತ ಒಬ್ಬ ಮಧ್ಯಮ ವರ್ಗದ ಗೃಹಸ್ಥ. ಅವನಿಗೆ ಸೀತೈಕ್ಕ ಅಂತ ಒಬ್ಬ ಮಗಳು. ಅವಳಿಗೆ ತಾರಕ ರಾವು ಅಂತ ಒಬ್ಬ ಸೋದರ ಮಾವ ಅಂದರೆ ಸೀತೈಕ್ಕನ ಅಮ್ಮನ ಅಣ್ಣ, ಈ ಮಾವನಿಗೆ ರಘುವೀರುಡು ಅಂತ ಒಬ್ಬ ಮಗ, ಅವನಿಗೆ ಪ್ರಭಾಕರುಡು ಅಂತ ಒಬ್ಬ ಅಣ್ಣ ಎಂದರೆ ದೊಡ್ಡಪ್ಪನ ಮಗ. ಪ್ರಭಾಕರುಡು, ರೈಸ್‌ಮಿಲ್ ಓನರು. "ರಘುವೀರುಡು ಪೇಂಟರು. ಅಂದರೆ ಆರ್ಟಿಸ್ಟು. ಸೀತಾಳನ್ನು ರಘುಗೆ ಕೊಟ್ಟು ಮದುವೆ ಮಾಡಬೇಕೆಂದು ನಿಶ್ಚಯವಾಗಿತ್ತು. ಸೀತಾನ ಅಮ್ಮನಿಗೆ ಅದು ಇಷ್ಟವಿಲ್ಲ. ಆದರೆ ಏನು ಮಾಡುವುದು ? ಇರುವ ಒಬ್ಬ ಮಗಳು ಪ್ರೇಮಮು ಅಂತ ಅಂದರೆ ಏನೂ ಮಾಡಲು ಸಾಧ್ಯವಿರಲಿಲ್ಲ. ಸೀತಾ, ರಘುವನ್ನು ನಿಜಕ್ಕೂ 'ಪ್ರೇಮಮು' ಮಾಡುತ್ತಿದ್ದಳು. ರಘು ವಿಲಾಯಿತಿಗೆ ತನ್ನ ಪೈಂಟಿಂಗ್ಸ್ ಪ್ರದರ್ಶನಕ್ಕೆ ಹೋದಾಗ ಪ್ರಭಾಕರ ಸೀತಾನ ಜೊತೆ ಓಡಾಟ ಮಾಡುತ್ತಿದ್ದ. ರಘು ಹಿಂದಿರುಗಿ ಬಂದೊಡನೆ ಸೀತಾನನ್ನು ನೋಡಲು ಬಂದ, ಆಗ ಈ ಪ್ರಕಾಶರಾವು ರಘುವಿಗೆ ಹೇಳಿದ್ದೇನೆಂದರೆ "ಎಂಗೇಜ್‌ಮೆಂಟ್ ಕ್ಯಾನ್ಸಲ್ ನಮ್ಮ ಸೀತೈಕ್ಕ ಪ್ರಭಾಕರುಡುವನ್ನು ಪ್ರೇಮಮು ಮಾಡುತ್ತಿದ್ದಾಳೆ ಅಂತ ನನಗೆ ಮನವರಿಕೆ ಆಗಿದೆ. ಅಲ್ಲದೆ ನಮಗಿರುವ 250 ಸಂಬಂಧೀಕರಲ್ಲಿ 160 ಜನ ಪ್ರಭಾಕರುಡುಗೆ ಬೆಂಬಲ ಕೊಡುತ್ತಾರೆ" ಎಂದ. ರಘು, ಇನ್ನೂರುಐವತ್ತೂ ಜನರನ್ನು ಕಂಡು ತನಗೆ 163 ಜನ ಬೆಂಬಲಿಗರಿದ್ದಾರೆ ಎಂದು ಕಂಡುಕೊಂಡ. ಹೀಗಿರಲು ಈ ಊರಿನ ವಾಮವಾದಿಗಳು, ದಕ್ಷಿಣ ವಾದಿ ಗಳು, ಮಧ್ಯವಾದಿಗಳು ಮತ್ತು ಬರಿಯ ವಾದಿಗಳು ಇಬ್ಬಣವಾಗಿ ಕಾದಾಡಲಾರಂಭಿ ಸಿದರು. ಸೀತೈಕ್ಕನ ಮನೆ ಅಂಗಳದಲ್ಲಿ ಪ್ರಭಾಕರುಡು 160 ಜನರನ್ನು ಹಾಜರು ಪಡಿಸಿದ. ಆಗ ರಘು ಪ್ರೇಮಸಂಕಟದಿಂದ ಪಾರಾಗಲು ತನ್ನ 163 ಜನ ಬೆಂಬಲಿಗ ರೊಡನೆ ಇಲ್ಲಿ ಹಾಜರಾಗಿದ್ದಾನೆ. ಇವರೆಲ್ಲರೂ ಸೀತೈಕ್ಕನ ನಿಜವಾದ ಸಂಬಂಧಿಕ ರಂತೆ."

ಕಾರ್ಯದರ್ಶಿಯ ಭಯಂಕರ ಕತೆಯನ್ನು ಕೇಳಿದ ತಥಾಗತ ನಿಟ್ಟುಸಿರುಬಿಟ್ಟು "ಅಯ್ಯಾ ಕಾರ್ಯವಿಮೂಢ, ನಾನು ಅಧ್ಯಕ್ಷನಾಗಿರುವುದು ಜನಗಳನ್ನು ಎಣಿಸಲಲ್ಲ. ಭಗ್ನ ಪ್ರೇಮಿಗಳನ್ನು ಜವಾಯಿಸಲು, ಅಲ್ಲದೆ ಎಣಿಸುವುದನ್ನು ಬಿಟ್ಟು ಎಷ್ಟೋ ವರ್ಷವಾಯಿತು. ಆದರೂ ಚಿಂತೆಯಿಲ್ಲ. ಅವರಿಗೆ ಹೇಳು, ಜನಗಳನ್ನು ಎಣಿಸಲು ಒಂದು ಫಾರ್ಮುಲಾ ಇದೆ. ಜನಗಳನ್ನೆಲ್ಲಾ ಎಣಿಸುವುದು ಅದಕ್ಕೆ ಪ್ಲಸ್ ಒಂದು ಮಾಡುವುದು. ಹತ್ತು ಜನ ಹೊಳೆ ದಾಟಿದಾಗ ಹಾಗೇ ಮಾಡಿದ್ದು."

"ತಥಾಗತ ನೀನೇ ಎಣಿಸಬೇಕಂತೆ"

"ಸರ್ರೀ ಹೋಯ್ತು, ಹೀಗೆ ಎಣಿಸಿದರೆ ಮುನಿಸಿಪಲ್ ಮೆಂಬರುಗಳು, ಎಮ್ಮೆಲ್ಯೆಗಳು, ಎಂಪಿಗಳು ಎಲ್ಲರೂ ನಮ್ಮನ್ನೂ ಎಣಿಸು ಅಂತ ಚಳುವಳಿಗೆ ಆರಂಭ ಮಾಡ್ತಾ ಕೂತರೆ ...... ಹೋಗಲಿ ಎಷ್ಟು ಜನ ಇದಾರಂತೆ."

"ನೂರಾ ಅರವತ್ಮೂರು."

"ನೂರಾ ಅರವತ್ಮೂರು ಅಂದರೆ ಅಂದಾಜು ಎಷ್ಟಾಗಬಹುದು ?"

"ನೂರಾ ಅರತ್ಮೂರೇ ತಥಾಗತ"

"ಇದ್ದೀತು. ನಾನೇ ಯಾಕೆ ಎಣಿಸಬೇಕು, ಎಲ್ಲೂ ಹಾಗೆ ಹೇಳಿಲ್ಲವಲ್ಲ ?"

"ನಿಮ್ಹತ್ರ ಅವರು ಬಂದಿರೋದು ಎಣಿಸ್ಲಿ ಅಂತ. ನೀವು........"

"ಹಾಂ, ನಂಗೊತ್ತು ಇದೆಲ್ಲಾ ನೇಗಾಗದೋರ ಕಿತಾಪತಿ, ಇದೊಂದು ಜೋಕ್ ಕಟ್ ಮಾಡ್ತಾ ಇದ್ದಾರೆ......."

"ಹೂಂ, ನೋಡೋಣ, ಮೊದಲು ನೂರಾ ಅರವತ್ಮೂರು ಅಂದ್ರೆ ಎಷ್ಟು ಹೇಳು ? ಇನ್ನೂರಐವತ್ತರಲ್ಲಿ ನೂರಾಅರವತ್ಮೂರು ಹೋದ್ರೆ ನೂರಾಅರವತ್ತು ಉಳಿಯುತ್ತೇ ?"

"ತಥಾಗತ, ನಮ್ಮ ಗಣಿತ ಪದ್ಧತಿ ಪ್ರಕಾರ, ಒಂದರಿಂದ ಅನಂತದವರೆಗೆ ಬೆಸ, ಸಮ ಸಂಖ್ಯೆಗಳಿವೆ........ಇದನ್ನು ಒಂದು ಕೊನೆಯಿಲ್ಲದ ಸರಣಿ ಅನ್ನ ಬಹುದು....... ಒಂದು, ಎರಡು, ಮೂರು ಹೀಗೆ........ನೀನು ಒಂದು ಅನ್ನು. ಗುಂಪಿನಿಂದ ಒಬ್ಬ ಈ ಕಡೆ ಬರ್ತಾನೆ. ಆಮೇಲೆ ಎರಡು, ಆಮೇಲೆ ಮೂರು, ನಾಲ್ಕು, ಹೀಗೆ ನೂರಾಅರವತ್ಮೂರು ಅಂದಾಗ ಕಡೇ ಮನುಷ್ಯ ಬಂದು ಗುಂಪು ಕರಗಿ ಹೋಗುತ್ತೆ........ಒಂಥರಾ ತುಂಬಾ ಸುಲಭ."

"ಹಾಂ ... ಅಷ್ಟೊಂದು ಸುಲಭ ಅಲ್ಲ ..ಈಕಡೆ ಬಂದೋರು ಮತ್ತೆ ಹಿಂದುಗಡೆಯಿಂದ ಬಂದು ಗುಂಪಿಗೆ ಸೇರಿಕೊಂಡು ಬಿಟ್ರೇ ?"

'ಅದಕ್ಕೂ ಒಂದುಪಾಯ ಇದೆ ತಥಾಗತ, ಓಟು ಹಾಕಿದಾಗ, ಬೆರಳಿನ ಮೇಲೆ ಚುಕ್ಕೇ ಇಡೋ ಹಾಗೆ............'

"ಭಿಕ್ಕೂ ಆದು ಅನುಕರಣೆ ಆಗೋದಿಲ್ವೇ, ಅದರ ಬದ್ಲು ತಿರುಪತೀ ಬೆಟ್ಟದ ಮೇಲೆ ತಿಮ್ಮಪ್ಪ........"

"ತುಂಬಾ ಸತ್ಯವಂತದೇವರು, ಗೋವಿಂದೋ ಗೋವಿಂದಾ !"

"ಆತನ ಮುಖದ ಮೇಲೆ ಕಣ್ಮುಚ್ಚೋ ಹಾಗೆ ಮೂರ್ನಾಲ್ಕು ಇರುತ್ತಲ್ಲ, ಅದಿರೋ ಥರಾ ನೂರಾ ಅರವತ್ನಾಲ್ಕು ಪ್ಲಸ್ ಒಂದು ಸ್ಟಿಕರ್ ತರಿಸಿಬಿಡು, ಅಲ್ಲ ತಂದು ಬಿಡು......."

"ಆ ಮೇಲೆ ?"

"ಒಂದೂ ಅಂತೀನಿ. ಬಂದೋನ ಹಣೆಗೆ ಒಂದು ಸ್ಟಿಕರ್, ಎರಡ್ನೇವನಿಗೆ ಇನ್ನೊಂದು, ಅವರೆಲ್ಲಾ ಮುಗಿದು ಬಿಟ್ಮೇಗ ಒಂದು ಸ್ಟಿಕರ್ ಉಳಿದ್ರೆ ಎಣಿಕೆ ಕರೆಕ್ಟು ಅಂತ"

"ಪ್ರಚಂಡ ಉಪಾಯ ತಥಾಗತ, ಇದುವರೆಗೂ ಯಾರೂ ಇಂಥ ಬುದ್ಧಿ ವಂತಿಕೆ ತೋರ್ಸ್ಲೇ ಇರಲಿಲ್ಲ, ಇನ್ನೊಂದು ಸ್ಟಿಕರ್ ಉಳಿಯುತ್ತಲ್ಲ. ಏನ್ಮಾಡ್ತಿ ?"

"ಅಷ್ಟೊಂದು ಜನಗಳನ್ನು ಇಷ್ಟೊಂದು ಸುಲಭವಾಗಿ ಎಣಿಸೋಕೆ ಹೇಗೆ ಸಾಧ್ಯ ಆಯ್ತು, ಅಷ್ಟೊಂದು ಎಣಿಕೆ ಬರುತ್ತ್ಯೆ ಅಂತಾ ಯಾರಾದ್ರೂ ಕೇಳ ಬೌದು, ಅದಕ್ಕೇ ಉಳಿದೊಂದನ್ನು ನಿನ್ನ ಹಣೆಗೆ ಅಂಟಿಸಿ, ಇವನ್ನೇ ಕೇಳಿ, ಅಂತಾ ತೋರ್‍ಸ್ತೀನಿ. ನಿನ್ನ ಹಣೆಗೆ ಹಚ್ಚಿದ ಸ್ಟಿಕರ‍್ರೇ, ಎಣಿಸಿದ್ದಕ್ಕೆ ಎವಿಡೆನ್ಸ್."

"ಅದ್ಭುತ, ಅಮೋಘ, ನನ್ನ ಕರ್ಸ್ನೋಪಕ್ಕೆ ತೊಂದ್ರೆ ಆಗುತ್ತೆ ತಥಾಗತ, ನಿನ್ನ ಹಣೆಗೇ ಹಚ್ಚಿಕೊಂಡು ಡೆಮಾನ್ಸ್ಟ್ರೇಟ್ ಮಾಡು"

ಇಲ್ಲಿಗೆ ಲೆಕ್ಕಾಚಾರ ಪ್ರಕರಣ ಮುಗಿಯಿತು.

(ಅ. ರಾ. ಸೇ. ಯು ಅಕ ವಿಪ್ರೇಪ ಕಡ ತೆಗೆದುಕೊಂಡಿದೆ)

ಜಿಪ್ಪುಣಾಗ್ರೇಸರ ಚಕ್ರವರ್ತಿ ತನ್ನ ಹೆಂಡತಿ ಮತ್ತೊಬ್ಬನ ಬಾಹು ಬಂಧನದಲ್ಲಿದ್ದುದನ್ನು ಆಕಸ್ಮಾತ್ ಕಂಡು, ಜೇಬಿನಿಂದ ಪಿಸ್ತೂಲ್ ತೆಗೆದು ಗುರಿಯಿಡುತ್ತಾ ಹೆಂಡತಿಗೆ ಹೇಳಿದ : 'ಕಳ್ಳ ಹೆಣ್ಣೇ, ನಿನ್ನ ಗೆಣೆಕಾರನ ಹಿಂದೆ ನಿಲ್ಲು, ಇಬ್ಬರನ್ನು ಒಂದೇ ಗುಂಡಿನಲ್ಲಿ ಉಡಾಯಿಸ್ತೇನೆ.

* * * *

'ನಿನ್ನ ಹೆಂಡ್ತಿ ನಿನ್ನ ಡ್ರೈವರ್ ಜೊತೆ ಓಡಿ ಹೋದಳಂತಲ್ಲಾ, ಪಾಪ !'

'ಓ, ಅದೇನೂ ಪರವಾಗಿಲ್ಲ. ಮುಂದಿನ ತಿಂಗ್ಳಿಂದ ಕೆಲ್ಸಕ್ಕೆ ಬರಬೇಡಾಂತ ನಾನೇ ಅವನಿಗೆ ನೋಟೀಸ್ ಕೊಟ್ಬಿಟ್ಟಿದ್ದೆ. ನಾನೇ ಡ್ರೈವಿಂಗ್ ಕಲಿತುಬಿಟ್ಟಿದೀನಿ ಈಗ'.

ಪರರ ವಿಕಾರ, ಕುಂದು, ಅತಿರೇಕಗಳನ್ನು ಅಣಕಿಸುವುದು ನಮ್ಮಲ್ಲಿರುವ ಸಹಜಗುಣ. ಕುಚೋದ್ಯದಿಂದ ಕೂಡಿದಾಗ ಈ ಅಣಕ ಸದಭಿರುಚಿಯದೆನಿಸುವುದಿಲ್ಲ; ಅತಿರೇಕಗಳನ್ನು ಅಣಕಿಸಿದಾಗ ನಗುವಿನ ಜೊತೆಗೆ ಅಂತಹ ತಪ್ಪನ್ನು ನಾವು ಮಾಡ ಬಾರದೆಂಬ ಅರಿವೂ ಬರಬಹುದು. ಅಣಕವಾಡು ಮೆಚ್ಚಿಗೆಯ ರೂಪಾಂತರ ಎಂದು ರಾಶಿಯವರು ಒಂದು ಸೂತ್ರವನ್ನು ಕೊಟ್ಟಿದ್ದಾರೆ.

ಗದ್ಯದ, ಪದ್ಯದ ಭಾಷೆ. ಭಾವಗಳನ್ನು ಉದ್ದೇಶ ಪೂರ್ವಕವಾಗಿ (ಅಥವಾ ಅನುದ್ದೇಪೂರ್ವಕವಾಗಿ) ಅಣಕಿಸಿ ಬರೆದ ಬರಹ ಇಂಗ್ಲೀಷಿನಲ್ಲಿ ವಿಶೇಷವಾಗಿ ಉಂಟು. ಕನ್ನಡದಲ್ಲಿ ಅಂತಹ ಬರಹದ ಪ್ರಮಾಣ ಗಣನೀಯವಾಗಿಲ್ಲ. ಆದರೆ ಗುಣಮಟ್ಟ ಕಳಪೆಯಲ್ಲ.

"ಸ್ವಸ್ತಿ ಶ್ರೀಮತ್ಸುರಾ ಸುರೇಂದ್ರ ಫಣೀಂದ್ರ" ಎಂಬ ಮುದ್ದಣನ ಅಣಕ ಬರಹ ಪ್ರಸಿದ್ಧವಾದುದೇ ಆಗಿದೆ.

ಇಂಗ್ಲೀಷಿನಲ್ಲಿ ಚಾಸರನಿಂದ ಆರಂಭಿಸಿ ಮೆಕ್ನೀಸ್‌ವರೆಗೆ ಕವಿಗಳೆಲ್ಲರ ಶೈಲಿಯ ಅಣಕವಾಡುಗಳಿವೆ. ಪ್ರಸಿದ್ಧವಾದ ಒಂದು ಕವನದ ಭಾಷೆ. ವಿಷಯ ಪ್ರತಿಪಾದನೆ, ಭಾವಗಳನ್ನು ಕ್ಷುಲ್ಲಕವಾಗಿರುವ ವಸ್ತುವಿಗನ್ವಯ ಮಾಡಿ ವಿನೋದಮಯವಾಗಿ ಬರೆದ ಕವನಗಳನ್ನು ಅಣಕವಾಡು ಎಂದು ಕರೆಯಬಹುದು. ಒಂದು ಕವನದ ಪ್ರತಿ ಸೃಷ್ಟಿಯೂ ಅಣಕವಾಡಾಗಬಹುದು.

ಉಮರನ ರುಬಾಯಿಯಾತ್ ಸದ್ಯ ಸ್ತೃಪ್ತಿವಾದವನ್ನು ಪ್ರತಿಪಾದಿಸುತ್ತದೆ. ಫಿಟ್ಸ್ ಜೆರಾಲ್ಡನ ಭಾಷಾಂತರವನ್ನು ಅಣಕಿಸುವ "ದಿ ಪ್ರಾಪ್ ಪ್ಪೈರ್ ಲ್ಯಾಡ್" ನಿರಾಶಾವಾದವನ್ನು ಪ್ರತಿಪಾದಿಸುತ್ತದೆ. ಸ್ಯಾಮ್ಯುಯೆಲ್ ಹಾಫೆನ್‌ಸ್ಟೀನನ "ದಿ ಪ್ರಾಪ್‌ಷೈರ್ ಲ್ಯಾಡ್ಸ್ ಕಸಿನ್" ನಿರಾಶಾವಾದವನ್ನೇ ಅಣಕಿಸುತ್ತದೆ. ಸರ್ ಜೆ. ಸಿ. ಸ್ಕ್ವಯರ್‌ನ "ಸ್ವಾನ್ ರಿವರ್ ಸ್ಮಶಾನದಲ್ಲಿ ಗ್ರೇ ತನ್ನ ಚರಮಗೀತೆಯನ್ನು ಬರೆದಿದ್ದರೆ" ಎಂಬ ಅಣಕವಾಡಿನಲ್ಲಿ ಗ್ರೇಯ "ಎಲಿಜಿ ರಿಟನ್ ಇನ್ ಎ ಕಂಟ್ರೀ ಚರ್ಚ್ ಯಾರ್ಡ್" ನಲ್ಲಿ ಪ್ರತಿ ಪಾದಿಸುವ ಎಲ್ಲಾ ನವಿರಾದ ಭಾವನೆಗಳನ್ನು ಅಲ್ಲಗಳೆಯಲಾಗಿದೆ.

ಏಪ್ರಿಲ್ 1943 ರಿಂದ ಏಪ್ರಿಲ್ 1967ರ ವರೆಗಿನ ಇಪ್ಪತ್ತೈದು ಸಂಪುಟ ಗಳಲ್ಲಿ ಕೊರವಂಜಿ ಸಮೃದ್ಧವಾದ ಅಣಕವಾಡುಗಳ ಫಸಲನ್ನು ಬೆಳೆಸಿದೆ. "ವಿನೋದ"ದಲ್ಲಿ ಇಂದಿಗೂ ಆಗೀಗ ಅಣಕವಾಡುಗಳು ಪ್ರಕಟವಾಗುತ್ತಿವೆ.

ಅಣಕವಾಡುಗಳ ಯಶಸ್ಸು ಅದೃಷ್ಟದಾಟ. ಮೂಲ ಪದ್ಯ ಓದುಗನಿಗೆ ಗೊತ್ತಿರಬೇಕು. ಅದರ ಗಂಭೀರವಾದ ಭಾವ ಅವನಿಗೆ ವೇದ್ಯವಾಗಿರಬೇಕು. ಅಣಕವಾಡಿನ ಕವಿ ಮೂಲವನ್ನು ಅಣಕಿಸುವುದರಲ್ಲಿ ಸದಭಿರುಚಿಯನ್ನು ತೋರಿಸಬೇಕು. ಅಣಕವಾಡಿನ ಭಾಷಾಬಂಧ ಮೂಲದಷ್ಟೇ ಬಿಕ್ಕಟ್ಟಾಗಿರಬೇಕು. ಅಲ್ಲಲ್ಲಿ ಶಬ್ದಗಳನ್ನು ಬದಲಾಯಿಸಿದರೆ ಸಾಲದು. Punning ಅಗತ್ಯವಾದರೂ ಅದರ ಶಕ್ತಿಯ ವ್ಯಾಪ್ತಿ ಸೀಮಿತವಾದುದು. ಹಾಸ್ಯದ ಅಭಿರುಚಿ ಅಣಕವಾಡು ಬರೆದವನ ಹಾಗೂ ಓದುಗನಿಗೆ ಸಮಾನವಾಗಿರಬೇಕು.

ಕೊರವಂಜಿಯಲ್ಲಿ ಬಂದ "ಪರಮಾಣು ಪರ್ವ"ವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. (ಬಹುಶಃ ನಾ. ಕ. ಅದರ ಕರ್ತೃಗಳು) ಕರ್ಣನ ಸರ್ಪಾಸ್ತ್ರ ಪ್ರಸಂಗದ ಅಣಕ ಅದು. ಪರಮಾಣು ಬಾಂಬಿನ ಪ್ರಯೋಗ ಈ ಶತಮಾನದ ಗಂಭೀರ ದುರಂತಗಳಲ್ಲೊಂದು. ಕುಮಾರವ್ಯಾಸನ ಪದ್ಯಗಳನ್ನು ಸಮರ್ಥವಾಗಿ ಬಳಸಿ ಬರೆದ ಆ ಅಣುಕವಾಡುಗಳನ್ನು ಸವಿಯಲು ಓದುಗ ಬಹುಶ್ರುತನಾಗಿರಬೇಕು.

ಕುಮಾರವ್ಯಾಸನ ಪದ್ಯಗಳ ಅಣಕಗಳಾದ ಅರಾಸೇಯವರ "ಹೇಳಿ ಫಲವೇನ್" "ಭೂಗ್ರಹಣ ಸಂಧಿ", "ಕ್ರಿಕೆಟ್ ಕರ್ಣಾಮೃತ"ಗಳು ಗಮನಾರ್ಹವಾದವು.

ಅ. ರಾ. ಸೇ. ಯವರ "ಶ್ರೀ ಸಾಮಾನ್ಯ ಸೂಕ್ತ" ಒಂದು ಗಮನಾರ್ಹ ಕೃತಿ ಎಂದಿಟ್ಟುಕೊಳ್ಳೋಣ. ಆಗ ಉಂಟಾಗುವ ಕಷ್ಟಗಳು ಹಲವು. ಅದು "ಪುರುಷ ಸೂಕ್ತ"ದ ಅಣಕವಾಡು. ಪುರುಷ ಸೂಕ್ತದ ಅರ್ಥದ ಪರಿಚಯವಿರುವವರೇ ಕಡಿಮೆ. ಅದರ ಕನ್ನಡ ಭಾಷಾಂತರಗಳು ಸುಪರಿಚಿತವಲ್ಲ. ಆದುದರಿಂದ ಮೂಲದ ಅರ್ಥವನ್ನವಲಂಬಿಸಿ ಬರೆದ ಈ ಅಣಕವಾಡು ಯಾರ ಕಣ್ಣಿದುರಿಗೂ ಬಾರದ, ಬಂದರೂ ಗಮನ ಸೆಳೆಯದ ಪರಿಸ್ಥಿತಿ ಉಂಟಾದುದರಲ್ಲಿ ಆಶ್ಚರ್ಯವೇನೂ ಇಲ್ಲ.

"ಕುಮಾರವ್ಯಾಸನು ಹಾಡಿದನೆಂದರೆ" ಕುವೆಂಪುರವರ ಪ್ರಸಿದ್ಧ ಪರಿಚಿತ ಕವನ. ಅದರ ಅಣಕವಾಡಾದ "ಬಡಾಯಿ ಬುಳ್ಳನು ಬುರುಡೆಯ ಹೊಡೆದರೆ" ಕೆಲವು ವರ್ಷಗಳ ಕಾಲ ಪ್ರಸಿದ್ಧವಾಗಿತ್ತು. ಆ ಕಾಲದ ಕಾಲೇಜ್ ವಾತಾವರಣ ಬದಲಾಗಿರುವ ಇಂದು ಅದರ ಪ್ರಸಿದ್ಧಿ ಮಸುಕಾಗಿದೆ.

ಕುವೆಂಪುರವರ "ಬಾಗಿಲೊಳು ಕೈ ಮುಗಿದು . . . . ." ಅಣಕವಾಡಾದ ಅ. ರಾ. ಮಿತ್ರರ ರಚನೆ ಪ್ರಸಿದ್ಧಿಯನ್ನು ಕಾಣಲಿಲ್ಲ. ರಾಮಿ ಅವರ ಅಣಕವಾಡುಗಳು ಬಹಳ ನವಿರಾದ ಹಾಸ್ಯದಿಂದ ಕೂಡಿದ್ದರೂ, ಪ್ರಸಿದ್ಧಿಯ ಗಾಳಿ ಅವುಗಳಿಗೆ ಸೋಕಲಿಲ್ಲ.

ಬೇಂದ್ರೆಯವರ "ಹಕ್ಕಿ ಹಾರುತಿದೆ ನೋಡಿದಿರಾ" ಪ್ರಸಿದ್ಧ ಉತ್ತಮ ಕವನ. ಅದರ ಮೇಲೆ ಅವರೇ "ಬೆಕ್ಕು ಹಾರುತಿದೆ ನೋಡಿದಿರಾ" ಎಂಬ ಅಣಕವಾಡನ್ನು ಬರೆದಿದ್ದಾರೆ. ಮೂಲದ ಪಾಕ ಅಣಕದಲ್ಲಿ ಅನುಕರಣೆ ಮಾತ್ರ ಆಗಿ ಉಳಿದಿದೆ. ಆದರೆ ಇಂತಹ ಅಣಕವನ್ನು ಬರೆಯುವ ಅವರ ಮನಸ್ಸಿನ ಪ್ರಜ್ಞೆಯ ಪರಿಪಾಕದ ಎತ್ತರ ಬಲು ಹಿರಿದು.

ನಾ. ಕ, ಅವರ ಲಘು ಕವನಗಳೂ, ಅಣಕಗಳೂ ತಮ್ಮದೇ ಆದ ಲವಲವಿಕೆಯಿಂದ, ಹಾಸ್ಯ ಪ್ರಜ್ಞೆಯಿಂದ ವಿಶಿಷ್ಟಸ್ಥಾನ ಗಳಿಸಿದೆ. ಜನಪ್ರಿಯವಾಗುವ ಎಲ್ಲಾ ಲಕ್ಷಣಗಳನ್ನೂ ಹೊಂದಿವೆ. ಸತ್ವವನ್ನೂ ಪಡೆದಿವೆ. ಕೊರವಂಜಿಯ ಓದುಗರ ಮನ ಸೆಳೆದಿವೆ. ಆದರೀಗ ಪುಸ್ತಕ ರೂಪದಲ್ಲಿ ಸಿಗುತ್ತಿಲ್ಲ.

ಶ್ರೀ ರಾಶೀಯವರ ಅಣಕವಾಡುಗಳೂ ತುಂಬಾ ಲವಲವಿಕೆಯಿಂದ ಕೂಡಿ ಉತ್ತಮ ಹಾಸ್ಯಪ್ರಜ್ಞೆಯ ಉದಾಹರಣೆಗಳಾಗಿವೆ. ಬೇಂದ್ರೆಯವರ 'ಬಂತು ಶ್ರಾವಣ ಕೆ. ಎಸ್. ನ.ರವರ 'ನೀ ಬರುವ ಹಾದಿಯಲಿ'. ವಿ.ಸೀ.ಯವರ ಹಲವು ಕವನಗಳ ಅಣಕವಾಡುಗಳನ್ನು ಉಲ್ಲೇಖಿಸಬೇಕು.

ಹಾ. ರಾ. ಅವರ ಕೆಲವು ಅಣಕವಾಡುಗಳು ಉತ್ತಮವಾಗಿವೆ. ಈಚೆಗೆ "ಸುಧಾ" ಅಣಕವಾಡುಗಳ ಪುನರುಜ್ಜೀವನಕ್ಕಾಗಿ ಒಂದು ಕರೆಗೊಟ್ಟು ತನ್ನ ಯುಗಾದಿ ಸಂಚಿಕೆಯಲ್ಲಿ ಹಲವು ಒಳ್ಳೆಯ ಅಣಕವಾಡುಗಳನ್ನು ಪ್ರಕಟಿಸಿತು. ಕೆಲವು ತಿಂಗಳುಗಳ ನಂತರ ಅಣಕವಾಡುಗಳು ಮತ್ತೆ ಮರೆಯಾದವು.

ಕನ್ನಡದ ಅಣಕವಾಡುಗಳಿಗೆ ಏನಾಗಿದೆ ? ಈಗ ಕೆಲ ಕನ್ನಡ ಕವನಗಳು ಕೆಲವು ವರ್ಗದ ಓದುಗರಿಗೇ ಸೀಮಿತವಾಗಿವೆ. ಇದು ಕಾವ್ಯ ಪ್ರಪಂಚದ ಬಾಲ್ಕನೈಸೇಷನ್ ಎನ್ನುವುದು ಕಟುವಾಗಬಹುದು. ಉತ್ತಮ ಕಾವ್ಯ ಎಲ್ಲ ಕಾಲಕ್ಕೂ ವಿರಳವೇ ಸರಿ. ಒಂದು ಕವನದ ಅಣಕವಾಡನ್ನು ಬರೆದರೆ ಮೂಲದ ಪರಿಚಯವಿಲ್ಲದೇ ಅದರ ರಸಾಸ್ವಾದನೆ ಕಷ್ಟವಾಗುತ್ತದೆ. ಮೂಲವನ್ನೂ, ಅದರ ಪಕ್ಕದಲ್ಲಿ ಅಣಕವಾಡನ್ನೂ ಪ್ರಕಟಿಸಿ ಈ ದೋಷವನ್ನು ಹೋಗಲಾಡಿಸಬಹುದು. ಆದರೆ ಇದು ಬಹು ಸಂಖ್ಯಾತರಾದ ಓದುಗರಿಗೆ ಕವಡು ಹಿಡಿಸುತ್ತದೆ. ಹಾಸ್ಯಾಸ್ಪದವೂ ಆಗಬಹುದು.

ಉತ್ತಮ ಅಣಕವಾಡುಗಳ ರಚನೆ ಕಷ್ಟದ ಕೆಲಸ. ಅದಕ್ಕೆ ಸಿಕ್ಕುವ ಮನ್ನಣೆ (ಮನ್ನಣೆ ಬಯಸಿಯೇ ಕವಿ ಅದನ್ನು ಬರೆಯಬೇಕು ಎಂದೇನೂ ಅಲ್ಲ.) ಅಲ್ಪ.

ಸಮಕಾಲೀನ ಕಾವ್ಯವಿಮರ್ಶಕರು, ಲಘು ಕವನಗಳು, ಅಣಕವಾಡುಗಳನ್ನು ಅತಿ ಲಘುವಾಗಿ ಪರಿಗಣಿಸುತ್ತಾರೆ. ಕವಿಗಳ ಕವನದ ಸಾರ್ಥಕತೆಯನ್ನು ಅದರ

ಮೇಲೆ ರಚಿತವಾದ ಅಣಕವಾಡುಗಳು ತೋರಿಸುತ್ತವೆ ಎಂಬ ಅಂಶವನ್ನು ಸಾಹಿತ್ಯ ಪ್ರಿಯರು ಮನಗಾಣಬೇಕು.

"ಉಮರನ ಒಸಗೆ"ಯ ಅಣಕವಾಡದ 'ಅರಾಸೆಯ ಒಸಗೆ'ಯ ಪಾಡನ್ನು ಗಮನಿಸೋಣ. "ನಗೆ ಮುಗಿಲು" ಕವನ ಸಂಗ್ರಹವನ್ನು ವಿಮರ್ಶಿಸಿದ ಒಬ್ಬರು ಮಾತ್ರ ಅದನ್ನು "ರಸವಂತ ಒಸಗೆ" ಎಂದು ಗುರ್ತಿಸಿದರು. ಉಳಿದವರದನ್ನು ಹೆಸರಿಸಲೂ ಇಲ್ಲ.

ಅಣಕವಾಡುಗಳು ಕಣ್ಮರೆಯಾಗಿರುವ ಸಾಹಿತ್ಯ ಪ್ರಕಾರವಲ್ಲ. "ವಿನೋದ", "ಸುಧಾ", "ಅಪರಂಜಿ"ಗಳಲ್ಲಿ ಇಂದೂ ಜೀವಂತವಾಗಿರುವ ಸಾಹಿತ್ಯ ಪ್ರಕಾರ. ಆದರೆ ವಿಮರ್ಶಕರು ಕಣ್ತೆರೆದು ನೋಡಬೇಕಾಗಿರುವ ಸಾಹಿತ್ಯ ಪ್ರಕಾರ. ಏಕೆಂದರೆ ಅಣಕ ವಾಡು ಕಣ್ಮರೆಯಾಗಬಾರದು.

ಇದುವರೆಗೆ ಪ್ರಕಟವಾಗಿರುವ ಉತ್ತಮ ಅಣಕುವಾಡುಗಳನ್ನು ಸಂಪಾದಿಸಿ ವಿಮರ್ಶೆಯೊಡನೆ ಪ್ರಕಟಿಸುವ ಅಗತ್ಯ ಬಹಳವಾಗಿದೆ. ಅಂತಹ ಸಮರ್ಥರನ್ನು ಹುಡುಕಿ. ಅವರಿಗೆ ಸೌಲಭ್ಯ ನೀಡಬೇಕಾದುದು ಪ್ರಕಾಶಕರ ಕರ್ತವ್ಯ. ಆ ಸಂಗ್ರಹ ಸುಲಭ ಬೆಲೆಗೆ ಓದುಗರಿಗೆ ಸಿಗುವಂತಾಗಬೇಕು. ಅಣಕವಾಡುಗಳನ್ನು ಓದಿ ಒಡನೆ ಮೌಲ್ಯಮಾಪನ ಮಾಡುವ ಆನಂದಿಸುವ ಸಹೃದಯರ ಸಂಖ್ಯೆ ಸಾಕಷ್ಟಿದೆ.

ಈ ದಿಸೆಯಲ್ಲಿ ಒಂದು ಸಲಹೆ. ಈಗ ಸುಗಮ ಸಂಗೀತದಲ್ಲಿ ಸುಪರಿಚಿತವಾಗಿ ರುವ ಕವನಗಳ ಅಣಕವಾಡುಗಳ ರಚನೆ, ಸಾಕಷ್ಟು ಜನಪ್ರಿಯತೆ ಗಳಿಸುವ ಸಾಧ್ಯತೆ ಇದೆ. ಲಘು ಕವನಗಳ ರಚನೆಯ ಕಡೆಗೆ ತರುಣ ಕವಿಗಳು ಗಮನ ಕೊಡುವುದು ಲಾಭದಾಯಕ.

ತಮ್ಮಯ್ಯ : ಮ್ಲಾನವದನವೇತಕೀಗ
ಹೇಳು ನಲ್ಲೆ ಹೇಳು ಬೇಗ

ನಲ್ಲೆ : ಹೇಳಲೇನು ಉಳಿಯಿತಿಂದು
ಮುಗಿದುದೆಮ್ಮ ಪ್ರೇಮವಿಂದು
ನೆರೆಯ ಮನೆಯ ಚಿಗುರು ತರುಣ
ನನ್ನ ಮನಕೆ ಸೂರ್ಯಕಿರಣ
ಅರಿಯಬಲ್ಲೆ ನಿನ್ನ ಅಳಲು
ಅಳಿಸು ನನ್ನ ನೆನಪ ಬಿಳಲು

ತಮ್ಮಯ್ಯ : ಕದ್ದ ಮಾಲ ತಿರುಗಿ ಕೊಟ್ಟು
ಹೊರಡು ನೀನು ಜಾಗ ಬಿಟ್ಟು

ನಲ್ಲೆ : ಕಳವು ! ಮಾಲು ! ಎಂಥ ಮಾತು
ಒಗಟು ಎನಗೆ ನಿನ್ನ Wrath ಉ !

ತಮ್ಮಯ್ಯ : ನೀನು ಕದ್ದ ನನ್ನ ಹೃದಯ
ಅಪ್ಪ ಕೊಟ್ಟ ಆಸ್ತಿ ಏನು ?

(ಸಾಧಾರ)

ಸೆಪ್ಟಂಬರ್ ೫–ಏಕೆ ? ಹೇಗೆ ?

—ಲೇ:–ಅ.ರಾ.ಸೇ.

ಸ್ಥಳ : ಜಟ್ಲಳ್ಳಿ ಪ್ರಾಥಮಿಕ ಶಾಲೆ–ನಾಲ್ಕನೆಯ ತರಗತಿ.

ಕಾಲ : ಮಧ್ಯಾಹ್ನ ನಾಲ್ಕು ಗಂಟೆ

ದಿನಾಂಕ : ಸೆಪ್ಟೆಂಬರ್ ನಾಲ್ಕು 1980

ಪಾತ್ರಧಾರಿಗಳು : ಹಳೆ ಹುಲಿಯಪ್ಪ. ಅ. ಮಾ. ಮತ್ತು ನಾಲ್ಕನೆಯ ತರಗತಿಯ ವಿದ್ಯಾರ್ಥಿಗಳು. ಹೆ. ಮಾ. ರವರು ತರಗತಿಗೆ ದಯಮಾಡಿಸಿದಾಗ ಇದ್ದಕ್ಕಿದಂತೆ ಆಕಾಶಪಟಲದಲ್ಲಿ ಕಾರ್ಮೋಡ ಕವಿದು ಕಗ್ಗತ್ತಲೆಯಾಯಿತು. ತರಗತಿಯ ಕವ ಮುಚ್ಚಿತ್ತು. ಕಿಟಕಿಯ ಮೇಲ್ಭಾಗದಿಂದ ಇಣುಕಿದಾಗ ಹುಲಿಯಣ್ಣ ಕುರ್ಚಿಯಮೇಲೆ ನಿದ್ರಿಸುತ್ತಿದ್ದರು. ಅವರ ಕಿವಿಗಳ ಮೇಲೆ ದಾಸವಾಳದ ಹೂ ಸಿಕ್ಕಿಸಿ, ತಲೆಯಮೇಲೆ ಗುಬ್ಬಿ ಗೂಡಿನ ಕಡ್ಡಿ, ಹುಲ್ಲುಗಳನ್ನೇರಿಸಿ, ಸುತ್ತಲೂ ಹುಡುಗರು ಕುಣಿಯುತ್ತಿದ್ದರು. ಒಬ್ಬನು 'ಎಲ್ಲಿ ನೀನೋ' ಎಂದು ರಾಗ ತೆಗೆದ. ಇನ್ನೊಬ್ಬ 'ಅಲ್ಲಿ ನಾನೋ' ಎಂದು ಪಾದಪೂರ್ಣ ಮಾಡಿದ. ಮೂರನೆಯವನು 'ನಾನೇ ರಾಧಾ' ಎಂದು ರಾಗವೆತ್ತಿದ ನಾಲ್ಕನೆಯವನು 'ನೀನೇ ಕೃಷ್ಣ' ಎಂದು ಮುಂದುವರಿಸಿದ, ಬಾಲಕರು ವಿಜಯಾವೇಶದಲ್ಲಿ 'ಭಲೇ ಜೋಡಿ' ಎಂವಬ್ಬರಿಸಿದರು ಹೆ.ಮಾ. ಕಣ್ಣು ಮುಚ್ಚಿ, ಕಿವಿಗಳಲ್ಲಿ ಬೆರಳಿಟ್ಟರು, ಶಾಲೆಯ ಮಕ್ಕಳು ಓದು ಬರಹ, ಲೆಕ್ಕಗಳಲ್ಲಿಲ್ಲದಿದ್ದರೂ ಅನುಕರಣ ಕಲೆಯಲ್ಲಿ, ಸೃಜನಾತ್ಮಕ ಉದ್ಯಮಗಳಲ್ಲಿ ಮುಂದುವರಿದಿದ್ದಾರೆ. ಬಾಲಕರ ಉತ್ಸಾಹಕ್ಕೆ ತಾವು ಅಡ್ಡಿ ಬರಬಾರದು ಎಂದು ಹಿಂದಿರುಗಿ ಕಚೇರಿಯಲ್ಲಿ ಕುಳಿತರು.

* * * * *

ಕಾಲ—ನಾಲ್ಕು–ಹದಿನೈದು. ಸ್ಥಳ–ಶಾಲೆಯ ಕಾರ್ಯಾಲಯ—ಪಾತ್ರಧಾರಿಗಳು–ಹೆ. ಮಾ ಮತ್ತು ಅ. ಮಾ.ಗಳು.

ಅ. ಮಾ. ಹ. ಹುಲಿಯಪ್ಪ–ಸಾರ್ ನಾಳೆ ಸೆಪ್ಟಂಬರ್ ಐದು.

ಹೆ. ಮಾ.–ಇರಬಹುದು. ಇರಬೇಕು. ಏಕೆಂದರೆ ನಾಡಿದ್ದು ಸೆಪ್ಟೆಂಬರ್ ಆರು

ಹ. ಹು–ನಾಳೆ ರಜಾ ಇಲ್ಲವೇ ?

ಹೆ. ಮಾ.–ನಾಳೆಯಾಕೆ ರಜಾ, ಇವತ್ತು ಮಧ್ಯಾಹ್ನವೇ ರಜಾ ಅಲ್ಲವೇ ?

ಹ. ಹು.–ಇದೇನ್ಸಾ ಹೀಗಂತಿರಿ ? ನಾಳೆ ಶಿಕ್ಷಕರ ದಿನಾಚರಣೆ.

ಹೆ. ಮಾ.–ಆದುದರಿಂದ ಶಿಕ್ಷಕರು ನಾಳೆಯಾದರೂ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕು.

ಹ. ಹು.–ಸಾರ್ ನಮ್ಮ ಕಾಲದಲ್ಲಿತ್ತು–ಉಪಾಧ್ಯಾಯರಿಗೆ ಮರ್ಯಾದೆ ಅಂದರೆ. ಈಗೇನ್ಸಾ ಎಲ್ಲಾ ಹೊಲಸಿಟ್ಟು ಹೊಯ್ತು. ನಾನು ಹೆ. ಮಾ. ಆಗಿದ್ದಾಗ ಹೆ. ಮಾ.––ಒಂದು ದಿನವಾದರೂ ಸ್ಕೂಲಿಗೆ ಹೋಗಿರಲಿಲ್ಲತಾನೇ ?

ಹ. ಹು. – ಆಗ ಈಗಿದ್ದ ಹಾಗಲ್ಲ ಸಾ, ಆಫೀಸರ್ಸ್ ಕೆಂಡದ ಹಾಗಿದ್ರು ಟೀಚರ್ಸ್ ಡೇ ಅಂದ್ರೇ ಎಷ್ಟು ಸಡಗರ !

ಹೆ. ಮಾ – ಯಾರಿಗೆ ?

ಹ. ಹು. – ಸ್ಕೂಲಿಗೆ ಎರಡು ದಿನ ರಜಾ

ಹೆ. ಮಾ. – ಅದಪ್ಪ ಆದರ್ಶರಾಜ್ಯ !

ಹ. ಹು. – ಹೋದವರ್ಷ ರಜಾ ಕೊಟ್ಟಿದ್ರಲ್ಲಸಾ ?

ಹೆ. ಮಾ – ಇಲ್ಲಾರೀ ನಾನು ಬಂದ ಮೇಲೆ ಕಾಲ ಕೆಟ್ಟು ಹೋಗಿ ಯಾವತ್ತೂ ರಜಾ ಕೊಟ್ಟಿಲ್ಲ. ಏಕೆಂದರೆ ಶಿಕ್ಷಕರೇ ಮನೇಲಿದ್ರೆ ಅವರ ದಿನಾಚರಣೆ ಮಾಡುವುದು ಹೇಗೆ ?

ಹ. ಹು. – ಬರ್‍ತಾ ಬರ್‍ತಾ ಕಾಲ ಕೆಟ್ಟು ಹೋಗಿದೆ ಸಾ.......................

ಹೆ. ಮಾ. – ಇದು ಅತ್ಯಂತ ನೂತನ ಸಂಶೋಧನೆ. ಇದರ ಮೇಲೆ ಒಂದು ಪ್ರಬಂಧ ಬರೆದು ಲೋಕಕ್ಕೆ ತಿಳಿ ಹೇಳ ಬೇಕಾದ ಕಾಲ ಒದಗಿದೆ.

ಹ. ಹು. – ಎಷ್ಟೇ ಆಗಲಿ, ನಾವು ಗುರುಗಳು. ದೇಶದ ಭಾವೀ ಪ್ರಜೆಗಳನ್ನು ....ಇದು ....ಇದು ಮಾಡುವ..........................

ಹೆ. ಮಾ – ಇಪ್ರಗಳು ಅನ್ನಿ. ಇಪ್ರಗಳನ್ನಾಗಿ ಮಾಡುವ,

ಹ. ಹು. – ಶಿಲ್ಪಿಗಳು. ಟೈಮಾಗ್ತಾ ಬಂತು. ನಮ್ಮ ಕಾಲದಲ್ಲಿ ನಾಲ್ಕು ವರೆಗೆ ಶಾಲೆ ಆಫ್......................ಈಗ ಮೆಮೊ ಹಾಕಿ ಸಾರ್..................

ಹೆ. ಮಾ – ಏನಂತ ?

ಹ. ಹು. – ನಾಳೆ ಹನ್ನೊಂದು ಗಂಟೆಗೆ ಮೀಟಿಂಗ್...........................

ಹೆ. ಮಾ - ಅಲ್ಲ ಹುಲಿಯಣ್ಣ ನಾಲ್ಕು ಗಂಟೆಗೆ ಮೀಟಿಂಗ್ ಅಂತ ಹಾಕೋಣ. ಮೀಟಿಂಗಿಗೆ ಪ್ರಿಪರೇಷನ್ ಟೈಂ ಬೇಕೇ ಬೇಕಲ್ಲ.

ಹ. ಹು. – ಒಪ್ಪಿದೆ ಸಾರ್. ಎಷ್ಟೇ ಆಗಲಿ ನೀವು ವಿದ್ಯಾವಂತರು. ಅನುಭವಿಗಳು. ಬೆಲ್ ಹೊಡೆಸೋಣವೇ ಸಾ.........................

ಹೆ. ಮಾ, – ಮೀಂಟಿಗಿಗೆ ಯಾರನ್ನ ಕರೆಯೋಣ ?

ಹ. ಹು. – ನೀವೇ ಇದೀರಲ್ಲಾ ಸಾ..................

ಹೆ. ಮಾ – ಈ ಶಾಲೆಯ ಮೀಟಿಂಗ್‌ಗಳಲ್ಲಿ ಅಧ್ಯಕ್ಷನಾಗಿ ಆಗಿ ಆಗಿ ವಾಕರಿಕೆ ಬಂದಿದೆ. ನೀವೇ ಅಧ್ಯಕ್ಷರಾಗಿ ಬಿಡಿ. ಸರ್ವೀಸ್ ಹ್ಯಾಂಡ್.

(ಆರನೆ ತರಗತಿಯ ಉಪಾಧ್ಯಾಯರ ಆಗಮನ)

ಆ. ತ. ಉ.– ಸಾರ್ ನಾಳೆ ಮತ್ತೆ ಏನು ? ರಜಾ ಇಲ್ಲವೇ ?

ಹೆ. ಮಾ – ಇದಕ್ಕೆಲ್ಲಾ ಎಲ್ಲಿಂದ ತರ್‍ತೀರಿ ರಜಾನ ? ನಾಳೆ ನಾಲ್ಕು ಗಂಟೆಗೆ ಮೀಟಿಂಗ್...............ಭಾಷಣಕ್ಕೆ ಯಾರನ್ನು ಕರೆಸೋಣ ?

ಆ. ತ. ಉ.– ಸಾರ್ ಒಂಟಿ ಹಾಳು ಹೈಸ್ಕೂಲಿಗೆ ಹೊಸ ಡ್ರಿಲ್ ಮೇಷ್ಟರು ಬಂದಿದ್ದಾರೆ ಅವರನ್ನು ಕರೆಸಿದರೆ ದೈಹಿಕ ಶಿಕ್ಷಣದ ಬಗೆಗೆ ಭರ್ಜರಿ ಭಾಷಣ ಮಾಡುತ್ತಾರೆ. ನಮ್ಮ ಹುಡುಗರಿಗೆ ಶಿಸ್ತನ್ನು ಕಲಿಸುತ್ತಾರೆ.

(ಐದನೆ ತರಗತಿ ಉಪಾಧ್ಯಾಯರ ಆಗಮನ)

ಐ. ತ. ಉ – ಸರ್ ಈ ಊರಿನ ಶಿಶುವಿಹಾರಕ್ಕೆ ಒಬ್ಬ ಹೊಸ ಮೇಡಂ ಬಂದಿದ್ದಾರೆ. ಅವರಿಗಿನ್ನೂ ಮದುವೆ ಆಗಿಲ್ಲ. ಸಂಗೀತ ಹೈಕ್ಲಾಸ್ ಹೇಳ್ತಾರೆ, ಅವರನ್ನು ಕರೆಸಿದರೆ..................................

ಹ. ಹು. – ಪದಕೇಳಕ್ಕೇನ್ರೀ ಮೀಟಿಂಗ್ ? ಶಿಕ್ಷಕರ ಘನತೆ ಪದಕೇಳಿದರೆ ಹೆಚ್ಚುತ್ತದೆಯೋ ?

ಹೆ. ಮಾ. – ಅಲ್ಲರೀ ನಾವು ಘನತೆವೆತ್ತವರು ಎಂದು ನಾವೇ ತಮಟೆ ಹೊಡೆಯಬೇಕೆ ? ಬೇಕಿದ್ರೆ ಊರಿನ ಮೀಟಿಂಗ್ ಮಾಡಿ ನಮಗೆ ಸನ್ಮಾನ ಮಾಡಲಿ.

ಐ. ತ. ಉ. - ಸರಿ ಹೋಯ್ತು ಸಾ. ಊರಿನ ಜನಗಳಿಗೆಲ್ಲಾ ಇವರಿಗೆ ಬಿತ್ತಲಿಲ್ಲ, ಬೆಳೀಲಿಲ್ಲ, ಮಳೆ ಬಂದರೂ ಬರದಿದ್ರೂ ದುಡಿಮೆ. ಇವರೇ ನಮಗೆ ಗೌರವ ಕೊಡಲಿ ಅಂತ ಹೇಳ್ತಾರೆ. ನಮಗೆ ರಜಾನೂ ಬೇಡವೇ ?

ಹ. ಹು. – ಅದಕ್ಕೆ ನಾ ನಾನು ಹೇಳಿದ್ದು. ಹೇಗಿದ್ದರೂ ಇವರು ನಮಗೆ ಸನ್ಮಾನ ಮಾಡುವುದಿಲ್ಲ. ಕನ್ನಡ ಭಾಷೆಗೆ ನ್ಯೂಜಿಲೆಂಡಿನಲ್ಲಿ ಮನ್ನಣೆ ಹೇಗೆ ಸಿಗಲು ಸಾಧ್ಯ ? ಕನ್ನಡ ನಾಡಿನಲ್ಲೇ ಅದಕ್ಕೆ ಮನ್ನಣೆ. ಹಾಗೇನೇ,ಮೇಷ್ಟರು ತಮ್ಮನ್ನು ತಾವೇ ಗೌರವಿಸಿಕೊಳ್ಳದಿದ್ದರೆ ಊರಿನವರು ಯಾಕೆ ಗೌರವಿಸುವ ಉಸಾಬರಿಗೆ ಹೋಗ್ತಾರೆ ?

ಹೆ. ಮಾ.– ಅದಕ್ಕೇನೇ ನಾವು ವೃತ್ತಿಗೌರವ ಪಾಲಿಸಲು ನಮ್ಮ ನಮ್ಮ ಕೆಲಸ ನಾವು ಮಾಡುತ್ತಾ ಇದ್ದು ಬಿಡೋಣ.

ಆ. ತ, ಉ. –ಗೌರವ ತೋರಿಸಲು ರಜಾ ಬಿಡುವುದೊಂದೇ ದಾರಿ ಸಾರ್ ನೆಹರೂ, ಹನುಮಂತಯ್ಯ, ಸಂಜಯ ಗಾಂಧಿ, ಅರಸು ಇವರೆಲ್ಲಾ ಹೋದಾಗ........

ಐ. ತ. ಉ. – ನಾಳೆ ಶಿಕ್ಷಕರು ಹೋದರು ಅಂತರಜವೋ.................. ಶಿಕ್ಷಣವೋ...................

ಹೆ. ಮಾ. – ಶಿಕ್ಷಕರ ಘನತೆಗೆ ವಾರ್ಷಿಕ....................

ಆ. ತ. ಉ. – ತರ್ಪಣ ?

ಹ. ಹು – ಸಬ್ಜೆಕ್ಟ್ ಬಿಟ್ಟು ಹೋಗಬಾರದು. ಅದರಿಂದಲೇ ನಾವು ಮರ್ಯಾದೆ ಕಳೆದು ಕೊಂಡಿರುವುದು.

ಹೆ. ಮಾ.— ನೋಡಿ, ಹೋದ ವರ್ಷದ ಮೆಮೋ ತೆಗೆಯಿರಿ. ಅದರ ಲ್ಲೇನಿದೆಯೋ ಅದನ್ನೇ ಮೆಮೋ ಹಾಕೋಣ. ಹಾಗೆಯೇ ಹೈಸ್ಕೂಲಿಗೆ ಹೋಗಿ ಬನ್ನಿ. ಏನು ಮಾಡ್ತಾರೋ ಅವರು ?

* * * *

ಹೈಸ್ಕೂಲು ಹೆ. ಮಾ. ರವರು ರಜಾದ ಮೇಲಿದ್ದರು ಅಸ್ಟೆಂಟುಗಳೆಲ್ಲಾ ಮುಗಿಲು ಹಳ್ಳಿಯಿಂದ ಹನ್ನೆರಡುಗಂಟೆಗೆ ಒಂದು ನಾಲ್ಕೂಮುಕ್ಕಾಲು ಗಂಟೆಗೆ ಹಿಂದಿರುಗುವವರು. ಇನ್ ಛಾರ್ಜ್‌ನಲ್ಲಿರುವ ನಾಲ್ಕನೆ ದರ್ಜೆ ನೌಕರನೇ ಶಿಕ್ಷಕರ ದಿನಾಚರಣೆ ಪ್ರಯುಕ್ತ ಮರುದಿನ ರಜಾ ಘೋಷಿಸಿದ್ದ. ಒಂದು ವೇಳೆ ಶಿಕ್ಷಕರು ಬಂದರೂ ವಿದ್ಯಾರ್ಥಿಗಳ ಗೈರುಹಾಜರಿನಲ್ಲಿ ಸಭೆ ನಡೆಸಲು ಅಸಾಧ್ಯ. ಆದುದರಿಂದ ಹನ್ನೆರಡುಗಂಟೆಗೇ ಸಭೆ ನಡೆಸಬೇಕೆಂದು ಹಳೆ ಹುಲಿಯಣ್ಣ ಆಶಾಭಾವನೆ ವ್ಯಕ್ತಪಡಿಸಿದರು. ಒಬ್ಬನಾದರೂ ಉಪಾಧ್ಯಾಯ ಬಂದೇ ಬರುವುದಕ್ಕೆ ಯಾವ ಅಡ್ಡಿ ಅಥವಾ ಆತಂಕಗಳಿಲ್ಲ. ಪುರಸಭೆ ಅಮಾನತಿನಲ್ಲಿದ್ದುದರಿಂದ ಎರಡನೆ ದರ್ಜೆ ನೌಕರನೇ ಮುಖ್ಯಾಡಳಿತಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಅವನು ಹೊಸದಾಗಿ ಮದುವೆ

ಯಾದವನು. ಅವನು ನಾಪತ್ತೆಯಾಗಿ ನಾಲ್ಕಾರು ದಿನಗಳಾಗಿದ್ದವು. ಟಿ. ಓ. ಡಿ. ತೆಗೆದುಕೊಂಡು ಹದಿನೈದುದಿನಗಳಾದರೂ ಕಟ್ಟಿಲ್ಲದಿದ್ದುದರಿಂದ ಸ್ಥಳೀಯ ಬ್ಯಾಂಕ್ ಮ್ಯಾನೇಜರನ್ನು ಹೋಗಿ ಕಾಣುವ ಧೈರ್ಯ ಯಾವ ಉಪಾಧ್ಯಾಯರಿಗೂ ಇರಲಿಲ್ಲ. ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಅದೇನೋ: ನೀವೇ ಬರೆದುಕೊಳ್ಳಿ ಏನಿದ್ದರೂ ಓದದೆ ಸೈನು ಹಾಕುತ್ತೇವೆ. ಇದು ಹೊಲ ತೋಟಗಳಲ್ಲಿ ಕೆಲಸದ ಕಾಲ ಸಂಜೆ ಆರು ಗಂಟೆಗೆ ಮನೆಗೆ ಬರುತ್ತೇವೆ ಬಂದು ಮುದ್ದೆ ತಿಂದರೆ ನಾಳಿನ ಓಜು ನೋಡಿ ನೋಡಿಕೊಳ್ಳಬೇಕು' ಎನ್ನುವ ಮಂದಿ.

*　　*　　*　　*

ಮರುದಿನ ಸಂಜೆ ನಾಲ್ಕು ಗಂಟೆಗೆ ಸಭೆ ನಡೆಯಿತು. ಅಲ್ಲಾದ ಅಮೂಲ್ಯ ಭಾಷಣಗಳ ಪೂರ್ತಿಪಾಠವನ್ನು ಕೊಡಲು ನಮಗಿಷ್ಟವಿದ್ದರೂ ಸಭೆಯಲ್ಲಿ ವರದಿಗಾರರ ಜೊತೆಯಲ್ಲಿದ್ದ ನಮಗೆ ಅರ್ಧದವರೆಗೆ ತಲೆನೋವು. ನಂತರ ತೂಕಡಿಕೆ ಬಂದದ್ದರಿಂದ, ಉಳಿದ ವರದಿಗಾರರ ವರದಿಗಳನ್ನು ಎತ್ತಿ ಬರೆದಿದ್ದೇವೆ. ನಮ್ಮ ಭಾರಿ ಭಾರಿ ಸಾಹಿತಿಗಳೇ ಕೃತಿಚೌರ್ಯದ ಮೇಲೆ ಜೇಳಿಕಾಳು ಬೇಯಿಸಿಕೊಳ್ಳುತ್ತಿರುವಾಗ, ಸಭೆಗಳೆಂದರೆ ವಾಂತಿ ಬರುವಷ್ಟು ಪೀಡಿತರಾದ ನಾವು ಹೀಗೆ ಮಾಡಿದ್ದರಲ್ಲಿ ತಪ್ಪೇನೂ ಇರಲಾರದು. ಅಲ್ಲದೆ 'ಕರ್ಣಪಿಶಾಚಿ' 'ಢಂ–ಢಮಾ–ಢಂ' ಮೊದಲಾದ ಪತ್ರಿಕೆಗಳ ವರದಿಕಾರರು ಚಾಚೂತಪ್ಪದೆ ನಮ್ಮ ವರದಿಯನ್ನೇ ಕದ್ದು ಬರೆಯಲು ಒಪ್ಪಿಗೆ ಕೊಟ್ಟ ನಮ್ಮ ನಿಲುವು ದೋಷರಹಿತವಾದದ್ದೆಂದು ಸಮರ್ಥಿಸಿಕೊಳ್ಳುವ ಅಗತ್ಯವೇನೂ ಇಲ್ಲ. ಸ್ವಾಗತ ಭಾಷಣ: ಹಳೆ ಹುಲಿಯಪ್ಪನವರಿಂದ. ಮನುಷ್ಯ ಜನ್ಮವೇ ಸರ್ವಶ್ರೇಷ್ಟ ಜನ್ಮ ಈ ಜಲ್ಮದಲ್ಲಿ ಮೇಷ್ಟರಾಗುವುದೇ ಸರ್ವಶ್ರೇಷ್ಠ. ಏಕೆಂದರೆ ಗುರುವೇ ಬ್ರಹ್ಮ. ವಿಸ್ನು ಮಹೇಸ್ವರ. ನಾವು ಗುರುಗಳಾಗಿರುವುದೇ ನಮ್ಮ ಹಿರಿಮೆಯನ್ನು ಸಾರುತ್ತದೆ. ಘನ ಸರ್ಕಾರದವರು ಇದನ್ನು ಗುರುತಿಸಿ.... ...... (ಭಯಂಕರ ಚಪ್ಪಾಳೆ)

ಒಂಟೀ ಹಾಳು ಡ್ರಿಲ್ ಮೇಷ್ಟರು :

ಅಧ್ಯಕ್ಷರೇ, ಸಹೋದರರಾದ ವೃತ್ತಿ ಭಾಂದವರೇ, ಇಂದು ಪರಮಪವಿತ್ರವಾದ, ಶುಭತಮವಾದ, ಪುಣ್ಯಕರವಾದ ಬಂಗಾರದ ಬಣ್ಣದಲ್ಲಿ ಸುವರ್ಣಾಕ್ಷರಗಳಿಂದ ಪ್ಲಾಟಿನಂ ತಗಡಿನಮೇಲೆ ಬರೆದು ವಜ್ರದ ರತ್ನದ ವೈಡೂರ್ಯದ ಗೋಮಯದ ಕಟ್ಟುಹಾಕಿಸಿ, ಬೆಳ್ಳಿಯ ಹುರಿಯನ್ನು ಕಟ್ಟಿ. ನೇತು ಹ ಕಲು ಹರ್ಷವಾದ ಪರಮ ಪವಿತ್ರ ಸುಬತಮ ಪುಣ್ಯಕರವಾದ ಅತ್ಯಂತ ಪ್ರಮುಖವಾದ, ಬೆಳ್ಳಿಯ ಹುರಿಯಿಂದ ಬಂಗಾರದ ತಗಡಿನಮೇಲೆ ಸುವರ್ಣಕ್ಷರದಿಂದ ನೇತುಹಾಕಬೇಕೆಂದು ನಾನು ಈ ಮೊದಲೇ ಹೇಳಿದದಿನ. ಏಕೆಂದರೆ ಗುರುಗಳು ಸರ್ವಶ್ರೇಷ್ಠರು, ಅದರಲ್ಲೂ ದೇಹವನ್ನು ಬೆಳೆಸುವ, ಆರೋಗ್ಯಕರವಾಗಿಡುವ, ದಷ್ಟ ಪುಷ್ಟವಾಗಿಡುವ ವ್ಯಾಯಾಮವು

ಹುಡುಗರಿಗೆ ಅತ್ಯಗತ್ಯ............ಇನ್ನೊಂದು ಮುಖ್ಯವಾಗಿ ಆಗಲೇಬೇಕಾದ ಕೆಲಸ ಎಂದರೆ ಎಲ್ಲ ವಿದ್ಯಾರ್ಥಿಗಳೂ ಯೋಗಾಸನಗಳನ್ನು ಕಲಿಯಲೇಬೇಕು. ಅದಕ್ಕಾಗಿ ಪ್ರತಿ ಸ್ಕೂಲಿಗೂ ಯೋಗ ಶಿಕ್ಷಣ ಕಲಿಸಲೇಬೇಕು................

ನರ್ಸರಿ ಹೊಸ ಮೇಡಂ :

ಇಲ್ಲಿರುವ, ಸಭೆಯಲ್ಲಿರುವ, ಸೇರಿರುವ, ಎಲ್ಲರಿಗೂ ಎಂದರೆ ವಿದ್ಯಾರ್ಥಿಗಳಿಗೂ, ಪ್ರರಪ್ರಮುಖರಿಗೂ, ಅಧ್ಯಕ್ಷರಿಗೂ ಹೇಳುವುದೇನೆಂದರೆ, ಈ ದಿನ ನಾವು ಏಕೆ ಎಂದರೆ ಸೇರಿದ್ದೇವೆ ಮತ್ತೂ ಏನೆಂಬ ವಿಷಯವನ್ನು ಎಲ್ಲರೂ ಹೇಳಿದ್ದಾರೆ, ಮತ್ತು ಏನೆಂದರೆ ನಾನು ಈ ಊರಿನಲ್ಲಿ ಟೆಂಪರವರಿ ನರ್ಸರಿಯಲ್ಲಿದ್ದೇನೆ. ಮತ್ತು ಎಲ್ಲ ಮಕ್ಕಳೂ ಗಮಕ ಕಲೆಯನ್ನು ಕಲಿಯಲೇಬೇಕು ಏಕೆಂದರೆ ನಾನು ಗಮಕ ಪರೀಕ್ಷೆ ಕಟ್ಟಿದ್ದೇನೆ. ಇಷ್ಟು ಹೇಳಿ ಮತ್ತು ಎಲ್ಲಾ ಹುಡುಗರು ಹೊಲಿಗೆ ಕಲಿತರೆ ಬಹಳ ಉತ್ತಮ. ಒಬ್ಬ ಹೊಲಿಗೆ ಮೇಡಂಬೇಕು.

ಆರನೇ ತರಗತಿ ಉಪಾಧ್ಯಾಯರು :

ಅಧ್ಯಕ್ಷರೇ, ಸಹ ಶಿಕ್ಷಕರೇ, ಇಂದು ಶಿಕ್ಷಕ ದಿನಾಚರಣೆಯ ಸಂದರ್ಭದಲ್ಲಿ ನಾನೇನು ಹೇಳುವನೆಂದರೆ ಮಕ್ಕಳೆಲ್ಲರೂ ಸ್ಕೌಟುಗಳಾಗಬೇಕು ಮತ್ತು ರೆಡ್‌ಕ್ರಾಸ್ ಪರೀಕ್ಷೆಯನ್ನು ಕಟ್ಟಲೇಬೇಕು. ಅಲ್ಲದೆ ಇದೇ ಸಂದರ್ಭದಲ್ಲಿ ಮಕ್ಕಳೆಲ್ಲರೂ ಹಿಂದೀ ಪರೀಕ್ಷೆಕಟ್ಟಿ ಭಾವೈಕ್ಯ ಮಾಡಬೇಕು. ಇಂದು ಶಿಕ್ಷಕರುಗಳ ದಿನಾಚರಣೆ ಏಕೆ ಮಾಡಬೇಕೆಂಬ ವಿಷಯ ಎಲ್ಲರಿಗೂ ಇದುವರೆಗೆ ಅನೇಕರು ಭಾಷಣ ಮಾಡಿದ್ದಾರೆ. ಡಾ॥ ರಾಧಾಕೃಷ್ಣನ್ ನಮ್ಮ ರಾಷ್ಟ್ರಪತಿಗಳು ಎಂದರೆ ಪ್ರೆಸಿಡೆಂಟ್ ಆಗಿದ್ದರು. ಅವರು ಪ್ರಕೃತಿ ಚಿಕಿತ್ಸೆ................(ಭಯಂಕರ ಚಪ್ಪಾಳೆ)

ಸಾರ್ವಜನಿಕ ಪ್ರತಿನಿಧಿ ಶ್ರೀ ಹನುಮಪ್ಪ :

ಅಧ್ಯಕ್ಷರೇ, ಮಕ್ಕಳೇ, ಹೆಡ್ಮಾಸ್ಟರೇ ಉಳಿದ ಉಪಾಧ್ಯಾಯರೇ ನಾನು ಶಿಕ್ಷಕರ ದಿನಾಚರಣೆಗೆ ಬರಲೇ ಬಾರದೆಂದಿದ್ದೆ. ಏಕೆಂದರೆ ಈದಿನ ಮೂರುಗಳೇವುಗಳು ಹೊಲಕ್ಕೆ ಹೋಗಿದ್ದವು. ಆದರೆ ಮಧ್ಯಾಹ್ನ ಆದಿಕ್ಕಿನಲ್ಲಿ ಮಳೆ ಬಂದಿದ್ದರಿಂದ ಇಲ್ಲಿಗೆ ಬಂದು. ಶಿಕ್ಷಕರುಗಳ ದಿನಾಚರಣೆ ವಿಷಯ ತಿಳಿದು ಬಹಳ ಸಂತೋಷವಾಯಿತು. ನೇಗಿಲಯೋಗಿಯೆಂಬ ಕವಿಯು 'ಉಳುವಾಯೋಗಿಯ ನೋಡಲ್ಲಿ' ಎಂದು ಹೇಳಿದ್ದಾನೆ. ಎಂದರೆ ಯೋಗಿಯೂ ಉಳುತ್ತಾನೆ. ವ್ಯವಸಾಯವನ್ನು ಕಲಿತರೆ ಜಾತಿ, ಮತ, ಬಡವ, ಬಲ್ಲಿದ ಎಲ್ಲ ಭೇದವೂ ಹೋಗಿ ಭಾವೈಕ್ಯ ಸಾಧಿಸಬಹುದು. ನಮ್ಮ ದೇಶದಲ್ಲಿ ಭಾವೈಕ್ಯವೇ ಈಗ ಬೇಕಾಗಿದೆ. ಶೇಕಡಾ ಎಂಬತ್ತು

ಜನಗಳು ವ್ಯವಸಾಯ ಮಾಡುತ್ತಾರೆ. ಪ್ರತಿಯೊಂದು ಶಾಲೆಗೂ ಒಬ್ಬ ವ್ಯವಸಾಯ ಮೇಷ್ಟರು ಬಂದರೆ ಖಂಡಿತವಾಗಿಯೂ ಭಾವೈಕ್ಯ.

ಅಲ್ಲದೆ ಮೊದಲು ಹೊಟ್ಟೆ ತುಂಬಿದ್ದರೇ ವಿದ್ಯೆ ಕಲಿಯಲು ಸಾಧ್ಯ. ಆದುದರಿಂದ ಹುಡುಗರಿಗೆ ಕೇರ್ ಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಈ ಹಿಂದೆ ಇದ್ದ ಹೆಡ್ಮೇಷ್ಟರೂ, ಕೇರ್ ಮೇಷ್ಟರೂ ಸಂಬಳ ಕಟ್ಟಾಗಿ ಕಂಪ್ಲೇಂಟಿನ ಮೇಲೆ ಊರು ಬಿಡಬೇಕಾಯಿತು. ಅವರು ಸಾರ್ವಜನಿಕರೊಡನೆ ಸಹಕರಿಸಿದ್ದರೆ ಅಂಥಾ ಗತಿ ಅವರಿಗೆ ಬರುತ್ತಿರಲಿಲ್ಲ. ನಿಂತುಹೋದ ಕೇರ್ ಈ ಕೂಡ್ಲೇ ಜಾರಿಗೆ ಬರಬೇಕೆಂದು ನಾನು ಒತ್ತಿ ಹೇಳುತ್ತೇನೆ.

ಆ ದಿನ ಅಕಸ್ಮಾತ್ತಾಗಿ ಶಾಲೆಗೆ ಸರ್ಪ್ರೈಸ್ ವಿಸಿಟ್ ಕೊಡಲು ಬಂದು ಸಭೆಯ ಅಧ್ಯಕ್ಷತೆಗೆ ಸಿಕ್ಕಿಹಾಕಿಕೊಳ್ಳಬೇಕಾದ ಸ್ನಾತಕ ನಿರೀಕ್ಷಕರ ಅಧ್ಯಕ್ಷ ಭಾಷಣ :

ಇಂದು ಶಿಕ್ಷಕರ ದಿನಾಚರಣೆ. ಶಿಕ್ಷಕರು ತಮ್ಮ ಕಷ್ಟಗಳನ್ನು ಮರೆತು ರಾಷ್ಟ್ರ ಸೇವೆಗೆ ತಮ್ಮನ್ನು ಮತ್ತೆ ಅರ್ಪಿಸಿಕೊಳ್ಳಬೇಕಾದ ದಿನ. ಆದರ್ಶ ಶಿಕ್ಷಕರೇ ರಾಷ್ಟ್ರದ ನಿಜವಾದ ಶಿಲ್ಪಿಗಳು, ಆದುದರಿಂದ ಸಾರ್ವಜನಿಕರು ಇಂದು ಸ್ಥಳೀಯ ಶಾಲೆಗಳಿಗೆ ಸೌಲಭ್ಯಗಳನ್ನೊದಗಿಸಿ ಕೊಡುವುದರ ಮೂಲಕ ಶಿಕ್ಷಕರ ಕಾರ್ಯಗಳು ಸುಗಮ ವಾಗುವಂತೆ ಮಾಡಬೇಕಾದ ದಿನ.

ಒಂದು ಮುಖ್ಯವಾದ ಅಂಶವನ್ನು ನಾವೆಲ್ಲ ಗಮನದಲ್ಲಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ಓದು, ಬರಹ, ಗಣಿತ, ವಿಜ್ಞಾನಗಳನ್ನು ಪಠ್ಯಕ್ರಮದಂತೆ ಕಲಿಯ ಬಹುದು.

(ಇನ್ಸ್ಪೆಕ್ಟರು ಕುಳಿತು ಹೆ.ಮಾ.ರಿಗೆ ಕಿವಿಯಲ್ಲಿ ಹೇಳಿದ್ದು : ಮೇಡಂ ಹೇಳಿದ್ದು ನಿಜ. ಹೇಗಿದ್ದರೂ ಶಾಲೆಗೆ ಕದ ಕಿಟಕಿಗಳಿಲ್ಲ. ಸಂಗೀತ ಕಲಿತರೆ ರಾತ್ರಿ ಯೆಲ್ಲಾ ಭಜನೆ ಮಾಡುತ್ತಾ ಶಾಲೆಯನ್ನು ಕಾದುಕೊಂಡಿರಬಹುದು)

ಹೆ.ಮಾ. ರಿಂದ ವಂದನಾರ್ಪಣೆ, ರಾಷ್ಟ್ರಗೀತೆಗಳೊಂದಿಗೆ ಸಭೆ ಮುಕ್ತಾಯ ವಾಯಿತು.

ಕೊಡೆಯ ಸತ್ಯ

ಜಡಿಮಳೆ ಹಿಡಿದ ಸಂಜೆ ಸದ್ಗೃಹಸ್ಥ ಸಂಪಂಗಿರಾಯ ಕೊಡೆಹಿಡಿದು ಪಾಯಿಂಟ್‌ಗೊಂದು ಪೈಸೆ ರಮ್ಮಿ ಆಡಲು ಕ್ಲಬ್‌ಗೆ ಬಂದರು. ಕೊಡೆಯನ್ನು ಮಡಿಸಿ ಮೂಲೆಯಲ್ಲಿಟ್ಟಿದ್ದ ಬಕೇಟ್‌ನೊಳಗೆ ಇತರ ತೊಟ್ಟಿಕ್ಕುವ ಕೊಡೆಗಳೊಂದಿಗೆ ಇಡುತ್ತಾ ಕ್ಲಬ್‌ನ ಪರಿಚಾರಕ ಬಾಬೂನ ಕೇಳಿದರು: ಇಲ್ಲಿಟ್ರೆ ಪರವಾಗಿಲ್ಲ ತಾನೊ? ಯಾರೂ ಕದ್ದುಕೊಂಡು ಹೋಗೋದಿಲ್ವಲ್ಲಾ?'

ಬಾಬು ಹೇಳಿದ: 'ಯಾರೂ ಕದೀಲಾರರು. ಆದ್ರೆ ಯಾರ್‌ದ್ರೂ ಗುರುತಿಸಬಹುದು'.

ಮಾಯಾನಗರಿ ಸ್ಟೇಡಿಯಂ :

ಬೌನ್ಸರ್ ಭಯಂಕರಾಚಾರ್ : ಕೇಳುಗಳಿಗೆ ಅಂದ್ರೆ ಓದುಗರಿಗೆ ನಮಸ್ಕಾರ. ನಾನು ಅಂದ್ರೆ ಸಣ್ಣ ಹುಡುಗ ಆಗಿದ್ದಾಗ ಗಿಲ್ಲಿದಾಂಡುವಿನಲ್ಲಿ ಬಹಳೇ ಜನರ ತಲೆ ಒಡೆದಿದ್ದ ಖ್ಯಾತಿಯ ಬೌನ್ಸರ್ ಭಯಂಕರಾಚಾರ್ ಹಾಗೂ ನನ್ನ ಜೊತೆ ವೀಕ್ಷಕ ವಿವರ್ಣಕಾರರಾದ ಕ್ಯಾರೇ ರೋಬರ್ಟ್ಸ್ ಹಾಗೂ ಶುಕ್ಲಾಕ್ಷಿಯವರು ಮಾಯಾನಗರಿ ಯಿಂದ ಮಾತಾಡ್ತಾ ಇದ್ದೇವೆ. ಕ್ಯಾರೇ ರೋಬರ್ಟ್ಸ್ ಅವ್ರು ಕ್ರಿಕೆಟ್ ಮೇಲೆ ಇದು ವರೆಗೆ ಬರೆದಿರೋಂಥ, ಬರೀದೇಇರೋಂಥ ಎಲ್ಲಾ ಪುಸ್ತಕಗಳನ್ನ, ಅದರಲ್ಲಿರುವ ಯಾವತ್ತೂ ಅಂಶಗಳನ್ನ ಅಂಕಿ ಶಂಕೆಗಳನ್ನ, ಕಂಠಪಾಟ ಮಾಡಿರುವ ಮೇಧಾವಿಗಳು. ನಮ್ಮ ಜೊತೆ ಎಕ್ಸಪರ್ಟ್ ಆಗಿರುವ ಶ್ರೀಮಾನ್ ಶುಕ್ಲಾಕ್ಷಿಯವರು ಈಗ್ಗೆ ಸುಮಾರು 40–50 ವರ್ಷಗಳ ಹಿಂದೆ "ಚೆಂಡನ್ನು ಮೂಸಿ ನೋಡಿ ಆಡು" ಅನ್ನೋ ಮಾತನ್ನು ಅಕ್ಷರಶಃ ಪಾಲಿಸೋದಕ್ಕೆ ಹೋಗಿ ದವಡೆ ಒಡೆದುಕೊಂಡ ಪ್ರಚಂಡ ಆಟಗಾರರು. ಅವರನ್ನು ಈ ಪಂದ್ಯಕ್ಕೆ ಎಕ್ಸಪರ್ಟ್ ಆಗಿ ಆರಿಸಿರೋದಿಕ್ಕೆ ಆಟದ ಬಗ್ಗೆ ಇರುವ ಅವರ ಅಪಾರ ಅಜ್ಞಾನವಲ್ಲದೇ ಅವರ ದಿವ್ಯದೃಷ್ಟಿನೂ ಕಾರಣ. ಮೊನ್ನೆ ತಾನೇ ಅವ್ರು ಕಣ್ಣು ಪರೀಕ್ಷೆಗೆ ಹೋಗಿದ್ದಾಗ "ಬೋರ್ಡಿನಲ್ಲಿ ಮೂರನೇ ಸಾಲು ಓದಿ" ಅಂತ ಡಾಕ್ಟ್ರು ಹೇಳಿದಾಗ "ಬೋರ್ಡ್ ಎಲ್ಲಿದೆ ?" ಅಂತ ಕೇಳಿದ್ದು ನಿಜ, ಜೋಕಲ್ಲ.

ಶುಕ್ಲಾಕ್ಷಿ : ಹಳೇ ಮಾತು ಹಾಗಿರ್ಲಿ ಭೌನ್ಸರಾಚಾರ್ರೇ...ಈಗ ಮೈದಾನದಲ್ಲಿ ಏನಾಗ್ತ ಇದೆ ಅಂತ ಸ್ವಲ್ಪ ಹೇಳಿ...ಈಚೆಗೆ ಬೌಂಡರಿ ಲೈನ್ ತುಂಬಾ ದೂರ ಇದೆ ಅನ್ನಿಸುತ್ತೆ...ಹಾಳಾದ್ದು ರೂಲ್ಸನ್ನು ಪದೇಪದೇ ಚೇಂಜ್ ಮಾಡ್ತಾರೆ ಅಂತ ಕಾಣುತ್ತೆ...

ಕ್ಯಾರೇ ರೋಬರ್ಟ್ಸ್ : ಮೈದಾನದಲ್ಲಿ ಏನೂ ನಡೀತಾ ಇಲ್ಲ. ಮಳೆ ಬೀಳುತ್ತಾ ಇದೆ. ಮಾಯಾನಗರಿಯಲ್ಲಿ ಕ್ರಿಕೆಟ್ ಆಟ ನಡೆದಾಗಲೆಲ್ಲಾ ಮಳೆ ಆಗೋದು ಒಂದು ಅದ್ಭುತ. ಇನ್‌ಫಾಕ್ಟ್ 13ನೇ ಶತಮಾನದಲ್ಲಿ ನಾಡಿನಲೆಲ್ಲಾ ಕ್ಷಾಮ ಉಂಟಾದಾಗ ದೇವದಾಸಿಯರಿಗೂ ದೀನದೋಸೆಯವರಿಗೂ ಕ್ರಿಕೆಟ್‌ಮ್ಯಾಚ್ ಆಡಿಸಿ ಕೋಟೆಗಳನ್ನು ನೆಡೆಸಿದ ಮರಗಳನ್ನು ಕಡಿಸಿದ ರಾಷ್ಟ್ರಕೀಟ ದೊರೆಗಳ ಸಾಧನೆ ನಿಮಗೆ ನೆನಪಿಲ್ಲವೆ ?

ಬೌ. ಭ : ಭಲೇ ಭಲೇ, ಕ್ರಿಕೇಟ್ನಿಂದ ಹಾಗಾದರೆ ಎಲ್ಲಾ ಬಡುಬಡವರೂ ಆಗರ್ಭ ಶ್ರೀಮಂತರಾದರೂ ಅನ್ನಿ

ಕ್ಯಾ.ರೋ : ಇಷ್ಟು ನಾವು ಹೇಳೋದ್ರಲ್ಲಿ ಮಳೆ ಕಡಿಮೆ ಆಯ್ತು. ಇವತ್ತು ಎರಡನೇ ದಿನದ ಆಟ. ಮೈದಾನ ಕಾಯುವ ಪಡೆಯವರು ಟಾರ್ಪಾಲ್ ಎಲ್ಲಾ ಎಳದು ಬಿಸಾಕ್ತಾ ಇದ್ದಾರೆ. ಅದರಲ್ಲಿದ್ದ ನೀರೆಲ್ಲಾ ಕ್ರಿಕೇಟ ಪಿಚ್‌ಮೇಲೆ ಚೆನ್ನಾಗಿ ಹರಡುತ್ತಾ ಇದೆ. ನಿನ್ನೆ ಆಟದ ಕೊನೇಲಿ ಬುಲ್‌ಬುಲ್ ಅವರು ಓಡಿದ್ದು ಮೂರೂವರೆ ರನ್ನೋ, ಮೂರೂಮುಕ್ಕಾಲೂ ರನ್ನೋ ಅನ್ನೋದರ ಬಗ್ಗೆ ನಡೆದ ವಿವಾದದಿಂದ ಮೈದಾನಕ್ಕೆ ಎಸೆಯಲ್ಪಟ್ಟ ಸೋಡಾಬಾಟಲ್, ಮುಸುಕಿನ ಜೋಳದ ದಂಟು, ಕಿತ್ತಲೆಸಿಪ್ಪೆ, ಖಾಲಿ ಸಿಗರೇಟ ಪಾಕೆಟ, ಬೀರ್‌ಕ್ಯಾನ್ (ಶಾತಂ ಪಾಪಂ, ಶಾಂತ ಪಾಪಂ) ಮತ್ತು ಮುರಿದ ಕುರ್ಚಿಗಳನ್ನು ಜೋಪಾನವಾಗಿ ಸಾಗಿಸಲಾಗುತ್ತಿದೆ

ಬೌ.ಭ : ಇವನ್ನೆಲ್ಲಾ ಎಷ್ಟು ಚುರುಕಾಗಿ ಮಾಡ್ತಿದಾರೆ ಅಂದ್ರೆ ಇವತ್ತು ಚಹಾ ವಿರಾಮದ ನಂತರ ಮೈದಾನ ರೆಡಿ ಆಗಿ ಆಟ ನಡೆದರೂ ನಡೀಬಹುದು.

ಶು : ಚಹಾ ವಿರಾಮದ ನಂತರವೇ ಆಟ ಅಂದ್ರೆ ಅದಕ್ಕೆ ಮುಂಚೆ ಆಟ ನಡೆಯೋ ಹಾಗೆ ಕಾಣಲ್ಲ ಅಂತ. ಈ ಸಂದರ್ಭದಲ್ಲಿ ನಾನು Expert Comments ಹೇಳಕ್ಕೆ ಇಷ್ಟಪಡ್ತೀನಿ. ನಿನ್ನೆ ಗಲಾಟೆ, ಇವತ್ತು ಮಳೆ ಇದನ್ನ ನೋಡಿದ್ರೆ ಮ್ಯಾಚ್ ಡ್ರಾ ಆದ್ರೂ ಆಗಬಹುದು. ಮಳೆ ನಿಂತಿದ್ರೂ ಮತ್ತೆ ಇನ್ನೂ ಗುಡುಗು ಕೇಳ್ತಾ ಇದೆಯಲ್ಲಾ.

ಕ್ಯಾ. ರೋ : ಅದು ಗುಡುಗಲ್ಲ, ವಿಮಾನದ ಸದ್ದು. ಬೆಂಗ್ಳೂರ್–ಬಾಂಬೆ ಬೋಲಿಂಗ್ 7 for 7 flightಉ. ಎಲ್ಲಾ ಕ್ರಿಕೆಟ್ ಸ್ಟೇಡಿಯಂ ಮೇಲೂ ಮ್ಯಾಚ್ ನಡೀತಿರುವಾಗ ವಿಮಾನಗಳು ಹಾರಾಡತ್ವೆ–ಗರುಡ ಪಕ್ಷೀತರ ಅಂತ–ಪಿಸನಾರಿಯವರು ಆತ್ಮಕಥೇಲಿ ಬರೆದಿಲ್ವೇನು ?

ಬೌ. ಭ : ಇಷ್ಟರಲ್ಲಿ ಮಳೆ ಪೂರ್ತಿ ನಿಂತಿದೆ. ಹರಹರ ಮಹದೇವ ತಂಡದವರು ನಮ್ಮ ಎಡಗಡೆ ಹಾಗೂ ಡರ್ಟಿ ಇಲೆವೆನ್ ನಮ್ಮ ಬಲಗಡೆ ಈಗ ಪೂರ್ವಾಭ್ಯಾಸದಲ್ಲಿದ್ದಾರೆ. ಮೈದಾನನೂ ಕ್ಲೀನಾ ಆಗಿದೆ. ನಿನ್ನೆ ಬಾಟಲ್ ಎಸೆದವರೆಲ್ಲಾ ಇವತ್ತು, ತಾವೇ ಅದನ್ನು ವಾಪಸ್ ಪಡೆದುಕೊಂಡು ಹೋಗಿದಾರೆ ಅಂತಕಾಣುತ್ತೆ.

ಕ್ಯಾ. ರೋ : ಡರ್ಟಿ ಇಲೆವನ್ ತಂಡದವರೆಲ್ಲಾ ಮೈಕೈ ಬಾಗಿಸ್ತಾ ಇದಾರೆ. ಎಡಗೈನಿಂದ ಬಲಗಾಲು, ಬಲಗಾಲಿನಿಂದ ಎಡಕೈ ಎಡಕಾಲಿನಿಂದ ಬಲಗಿವಿ ಮುಟ್ಟಿಸೋದಕ್ಕೆ ಪ್ರಯತ್ನ ಮಾಡ್ತಿದಾರೆ. ಹರಹರ ಮಹಾದೇವ ತಂಡದವರು ಮಾತ್ರ ಏನೂ ಮಾಡದೇ ಚಕ್ಕಳಮಕ್ಕಳ ಕೂತಿದಾರೆ.

ಬೌ.ಭ : ಹಾಗಲ್ಲ, ಪದ್ಮಾಸನ ಅಂತ್ಹೇಳಿ.

ಕ್ಯಾ. ರೋ : ಹಾಗೇಂತಿಟ್ಕೊಳ್ಳಿ, ತಂಡದ ನಾಯಕ ವೇಲಾಯುಧನ್ ಮಾತ್ರ ಶವಾಸನಹಾಕಿ ಮಲಗಿದ್ಧಾರೆ. ಹಿಂದೆ ಒಂದ್ಸಲ ಅಂದ್ರೆ 1334 ಆಗಸ್ಟ್ 24 ರಂದು ಬೆಳಗ್ಗೆ 9ಗಂಟೆ 24 ನಿಮಿಷ 35 ಸೆಕೆಂಡಿಗೆ ಬಾಕ್ಸ ಆಫ್ ಬಫೂನ್ ತಂಡದ ನಾಯಕ ಗ್ರೇ ಚಪ್ಪಲ್ ಅವ್ರು ಹೀಗೇ ಶವಾಸನ ಹಾಕಿ ಮಲಗಿದೋರು ಅರ್ದಗಂಟೆ ಆದ್ರೂ ಏಳಲೇ ಇಲ್ಲವಂತೆ. ತಂಡದವರೆಲ್ಲಾ ಬೊಬ್ಬೆ ಹೊಡೆದರು, ಪಿಟ್ ಅನ್ನಲಿಲ್ಲ, ಇಡೀ ಸ್ಟೇಡಿಯಂ ಕೂಗಿಕೊಂಡಿತು. ಜಪ್ಪನ್ನಲಿಲ್ಲ.

ತು : ಇವತ್ತೂ ಹಾಗೇ ಆದ್ರೆ ಪಂದ್ಯ ಡ್ರಾ ಆಗುತ್ತೆ ಅಂತ ನನ್ನ Expert Comments ಹೇಳಕ್ಕೆ ಇಷ್ಟಪಡ್ತೀನಿ. ಯಾಕೇಂದ್ರೆ ಅರಮನೆ ಬ್ಯಾಂಡ್ ಕರಿಸೋದು, ಫೈರಬ್ರಿಗೇಡ್ ತರಿಸೋದು ತಕ್ಷಣಕ್ಕೆ ಅಂದ್ರೆ ಹುಡುಗಾಟ ಅಲ್ಲ.

ಬೌ. ಭ : ಇಷ್ಟರಲ್ಲಿ ಅಂಪೈರ್‌ಗಳು ಮೈದಾನಕ್ಕೆ ಬರ್‍ತಿದಾರೆ. ಅವ್ರು ಮೈದಾನಕ್ಕೆ ಬರ್‍ತಿದ್ದ ಹಾಗೇನೇ ತುಂತುರು ಮಳೇನೂ ಚಾಲು ಆಗಿದೆ.

ಕ್ಯಾ.ರೋ : ಕಳೆದ ವರ್ಷ ಲೀಚ್ ಈಸ್ಟರ್‌ನಲ್ಲಿ ಒಂದು ಮ್ಯಾಚ್‌ನಲ್ಲಿ ಹೀಗೇ ಆಯ್ತಂತೆ. ಐದೈದು ನಿಮಿಷಕ್ಕೆ ಮಳೆ ಬಂದು ಅಂಪೈರ್‌ಗಳು ಪೆವಲಿಯನ್‌ನಿಂದ ವಿಕೇಟಿಗೆ ಮಾಡಿದ ಪರೇಡ್‌ನ ದೂರ ಭೂಮಿಯಿಂದ ಸೂರ್ಯನಿಗಿರುವ ದೂರದ ಮೂರರಷ್ಟು ಅಂತ ಲೆಕ್ಕ ಹಾಕಿದಾರೆ.

ಬೌ.ಭ : ಆಟ ಇನ್ನೇನು ಶುರು ಆಗ್ತಿದೆ. ಬೌಲರ್ ದೂರದ ತುದಿಯಲ್ಲಿ ಬೌಂಡರಿಯಲ್ಲಿ ನಿಂತಿದ್ದಾರೆ. ಚೆಂಡು ಕೈಯಲ್ಲಿ, ಚೂಯಿಂಗ್‌ಗಂ ಬಾಯಲ್ಲಿ, ನೋಟ ಆಕಾಶದಲ್ಲಿ ಇವೆ. ಅವ್ರು ಓಟ ಶುರುಮಾಡಿದ್ದ ಹಾಗೇ ಬ್ಯಾಟ್ಸಮನ್ ಬೂಟಿನ ಲೇಸ್ ಬಿಚ್ಚಿಹೋಗಿದೆ. ಅದನ್ನು ಈಗ ಅಂಪೈರ್ ಕಟ್ತಾ ಇದಾರೆ.

ಕ್ಯಾರೋ : ಬುಲ್‌ಬುಲ್ ಅವ್ರ ಬೂಟಿನ ಲೇಸ್ ಬಿಚ್ಕಿಕೊಳ್ತಾ ಇರೋದು ಈ ಪಂದ್ಯದಲ್ಲಿ ಇದು ಮುವ್ವತ್ತನೇದು. ಹದಿನಾರು ಸಲ ಎಡಗಾಲಿನದು ಹತ್ತು ಸಲ ಬಲಗಾಲಿನದು ಉಳಿದಂತೆ ಎರಡೂ ಕಾಲಿನದು.

ತು : ಹೀಗೆ ಆದ್ರೆ ಮ್ಯಾಚ್ ಡ್ರಾ ಆಗುತ್ತೆ ಅಷ್ಟೇ. ನಾನು ಆಗ್ಲೇ ಹೇಳಿದ ಹಾಗೇ...

ಬೌ.ಭ : ಇಷ್ಟರಲ್ಲಿ ಬೌಲರ್ ಿರ್ರಾ ಓಡಿ ಬರ್‍ತಾ ಇದಾರೆ. ಬೌಲ್ ಮಾಡಿದ್ದಾರೆ. ಚೆಂಡು ಬ್ಯಾಟ್‌ಗೆ ಬಡಿದು ಮೇಲಕ್ಕೆ ಹಾರಿದೆ, ಬಹಳ ಎತ್ತರಕ್ಕೆ ಹಾರಿದೆ, ಅದನ್ನೇ ನೋಡ್ತಾ ಫೈನ್‌ಲೆಗ್, ಸ್ಕೇರ್‌ಲೆಗ್, ರೌಂಡಲೆಗ್, ಎಲ್ಲಾಕಡೆಯಿಂದ

ಫೀಲ್ಡರ್‌ಗಳು ಜಮಾಯಿಸ್ತಾ ಇದಾರೆ. ಅಷ್ಟರಲ್ಲಿ ಎಲ್ಲಿಂದಲೋ ಬಂದ ಗಿಡುಗ ಆ ಚೆಂಡನ್ನು ಕಚ್ಚಿಕೊಂಡು ಹೋಗಿದೆ.

ಕ್ಯಾ.ರೋ : ಹೀಗೆ ಒಂದ್ಸಲ 1846 ಜನವರಿಯಲ್ಲಿ ಆಗಿತ್ತೂಂತ.

ಶು : (ಮಧ್ಯೆ ಪ್ರವೇಶಿಸಿ) ತಡೀರಿ ಸ್ವಲ್ಪ, ಆ ಪುರಾಣ ಆ ಮೇಲಾಗ್ಲಿ... ಹೀಗೆ ಚೆಂಡು ಕಳದ್ಹೋದ್ರೆ ಮ್ಯಾಚ್ ಡ್ರಾ ಆಗುತ್ತೇಂತ ನನ್ನ Expert ಶಾ....

ಬೌ.ಭ : ನೀವಿಬ್ರೂ ನಂಗೆ ಮಾತಾಡೋಕೇ ಬಿಡಲ್ಲ.... ಆ ಗಿಡುಗ ದರ್ಟಿ ಟ್ರಿಕ್ಸ್ ಮಾಡ್ತಿರೋದ್ರಿಂದ ಆದು ಡರ್ಟಿ ಇಲೆವಲ್ ಪಕ್ಷಪಾತ ಅಂತ ಕೂಗೆದ್ದಿದೆ...

ಕ್ಯಾ.ರೋ : ಮತ್ತೆ ಮೈದಾನದಲ್ಲಿ ಸೋಡಾ ಬಾಟಲುಗಳು ಬೀಳ್ತಾ ಇವೆ...

ಶು ; ಖಾಲೀನೋ....ಸೋಡ ಇದೆಯೋ ನೋಡಿ ಹೇಳಿ ಸ್ವಲ್ಪ ...

ಬೌ.ಭ : ಈಗ ಮತ್ತೆ ಹರಹರ ಮಹಾದೇವ ತಂಡದವರು ಪದ್ಮಾಸನ ಶವಾಸನದಲ್ಲಿ ತೊಡಗಿದಾರೆ.

ಶು : ಆಯ್ತು ಬಿಡಿ, ಮ್ಯಾಚ್ ಡ್ರಾ ಆದ ಹಾಗೇಂತ ಇಟ್ಕೊಳ್ಳಿ ನಾ ಹೇಳಿದ ಹಾಗೇ...

ಕ್ಯಾ.ರೋ : ಒಂದೇ ಚೆಂಡು ಬೌಲ್ ಆಗಿ ಆಟ ನಿಂತಿರೋದು ಮಾಯಾ ನಗರಿಯಲ್ಲಿ ಇದು ನಾಲ್ಕುನೂರಾ ತೊಂಭತ್ತನೇ ಸಾರಿ ಅಂತ ನಾನು ಹೇಳಬಲ್ಲೆ...

ಬೌ.ಭ : ಮೈದಾನದಲ್ಲಿ ಎಷ್ಟು ಕುರ್ಚಿ, ಬಾಟಲ್ ಬಿದ್ದಿವೆ ಅಂತ ನೀವು ಎಣಿಸಿ. ಅದನ್ನ ಹೇಳಕ್ಕೆ ಮತ್ತೆ ಬರೋಣ. ಅಲ್ಲೀವರೆಗೆ ಕೇಳುಗರನ್ನ ನಿಲಯಕ್ಕೆ ಹಿಂತಿರುಗಿಸೋಣ.

ಶು : ಅಷ್ಟೇಮಾಡಿ, ಹೇಗೂ ಮ್ಯಾಚ್ ಡ್ರಾ ಆಗುತ್ತೆ....... ...

ಭಾರತದ ಈಗೀನ ಪರಿಸ್ಥಿಯನ್ನು ನೋಡಿದರೆ, ಹತ್ತು ವರ್ಷಗಳ ನಂತರ ತಾಯಿ, ಮಗಳಿಗೆ ಬರೆಯಬಹುದಾದ ಪತ್ರದ ನಮೂನೆ ಹಿಗೀರಬಹುದು ಅಂತ ನನ್ನ ಗುಮಾನಿ........

ಪ್ರೀತಿಯ ಶೀಲಾ,

ನೀನು ಮಿ. ರಾವ್ ಜೊತೆ ಕಳುಹಿಸಿದ ಪತ್ರ ತಲುಪಿತು. ಪೋಸ್ಟಲ್ ಸ್ಟ್ರೈಕ್ ಇನ್ನೂ ಮುಗಿದಿಲ್ಲವಾದ್ದರಿಂದ, ನಿಮ್ಮೂರಿಗೆ ಹೋಗುತ್ತಿರುವ ಮಿಸೆಸ್ ಜೋಷಿ ಮೂಲಕ ಈ ಕಾಗದವನ್ನು ಕಳುಹಿಸುತ್ತಿದ್ದೇನೆ. ಹಿಂದೆ ಫೋನ್ ಮಾಡಿ ಯಾದರೂ ಯೋಗಕ್ಷೇಮ ತಿಳಿದು ಕೊಳ್ಳಬಹುದಾಗಿತ್ತು. ಈಗ ಫೋನ್‌ಗಳೂ ಪೂರ್ತಿ ಪ್ರಾಣ ಬಿಟ್ಟಿರುವುದರಿಂದ ಅದೂ ಸಾಧ್ಯವಿಲ್ಲ. ಈ ತಾಪತ್ರಯ ನೋಡಿ ದರೆ, ಇನ್ನುಮೇಲೆ ಕಾಗದ ಕಳಿಸಲು ಪಾರಿವಾಳಗಳನ್ನು ಟ್ರೇನ್ ಮಾಡುವುದೇ ವಾಸಿ ಎಂದು ನಿಮ್ಮ ತಂದೆ ಹೇಳುತ್ತಿರುತ್ತಾರೆ !

ರವಿ ಕೆಲಸ ಬಿಡಬೇಕೆಂದಿದ್ದಾರೆ ಎಂದು ಬರೆದಿದ್ದಿ. ನೀನು, ರವಿ ನಮ್ಮ ಮಾತಿಗೆ ಬೆಲೆಕೊಟ್ಟು ಅಮೇರಿಕಾದಲ್ಲೆ ಉಳಿದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಮಾಲಾ, ಶೋಭಾ, ಮತ್ತು ರಮೇಶ ಅಲ್ಲೇ ಎಷ್ಟೊ ಸುಖವಾಗಿದ್ದಾರೆ. ರವಿಗೆ ಬೇರೆ ಕೆಲಸ ಸಿಗುವುದೂ ಕಷ್ಟ. ಅವನಿಗೆ ಇರುವುದು ನೂರೆಂಟು ಭಾರಿ ಡಿಗ್ರಿಗಳು, ಕೆಲಸದಲ್ಲಿ ಅನುಭವ ಹಾಗೂ ಕಷ್ಟಪಟ್ಟು ದುಡಿಯುವ ಮನೋಭಾವ. ಇದರಿಂದ ಏನಾದೀತು ಹೇಳು ? ದೇವರಿದ್ದಾನೆ. ನೋಡೋಣ.

ನಿನ್ನ ಆರೋಗ್ಯ ಹೇಗಿದೆ, ಕೆಲಸದಲ್ಲಿ ಪ್ರಮೋಶನ್ ಸಿಗುವಹಾಗಿದೆ ಎಂದು ಬರೆದಿದ್ದಿ, ತುಂಬಾ ಸಂತೋಷ.

ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಆಫೀಸ್ ಕೆಲಸದ ಗಲಾಟೆಯಲ್ಲಿ ಜವಾಬ್ದಾರಿಗಳನ್ನು ಮರೆಯಬೇಡ. ಸತೀಶನಿಗೆ ಹತ್ತು ವರ್ಷವಾಗುತ್ತಾ ಬಂತು, ಯಾವ ಯಾವ ಆಟಗಳನ್ನು ಆಡುತ್ತಾನೆ. ಯಾವ ಆಟದಲ್ಲಿ ಆಸಕ್ತಿ ಇದೆಯೊ ಅದಕ್ಕೆ ಪ್ರೋತ್ಸಾಹ ಕೊಡು. ಟೆನ್ನಿಸ್ ಅಥವಾ ಕ್ರಿಕೇಟ್ ಯಾವುದಾದರೂ ಒಂದನ್ನು ಭದ್ರಮಾಡುವುದೇ ವಾಸಿ. ಅವರವರ ಕಾಲಿನಮೇಲೆ ಅವರು ನಿಲ್ಲುವುದು ಅಗತ್ಯ.

ಮದನ್‌ಗೆ ಓದುವ ಹುಚ್ಚು ಎಂದು ಬರೆದಿದ್ದಿ. ಓದಿ ಗಾಬರಿಯಾಯಿತು. ಅಷ್ಟು ಲಕ್ಷಣವಾಗಿರುವ ಮಗು ಈ ಅಪ್ರಯೋಜಕ ಹವ್ಯಾಸಗಳಿಗೆ ಬೀಳುವುದು ಸರಿಯಲ್ಲ. ನಾಟಕ, ಸಿನಿಮಾಗಳಿಗೆ ಬಿಡವು ಮಾಡಿಕೊಂಡು ಕರೆದುಕೊಂಡು ಹೋಗು. ಆಗ ಅವರಲ್ಲಿ ಇಂಟ್ರೆಸ್ಟ್ ಡೆವಲಪ್ ಆಗುತ್ತೆ. ಮುಂದೆ ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್ ಮುಂತಾದ ಭಾರಿ ಕಡೆಗಳಲ್ಲಿ ಸೀಟು ಸಿಗುವ ಹಾಗೆ ಮಾಡಬೇಕು. ಎಲ್ಲರಿಗೂ ತಿಳಿದ ಹಾಗೆ ಆ್ಯಕ್ಟಿಂಗ್ ತುಂಬಾ ಒಳ್ಳೆ ಕೇರಿಯರ್. ಅದರಲ್ಲಿ ಚೆನ್ನಾಗಿ ಮುಂದೆ ಬಂದರೆ ರಾಜಕೀಯಕ್ಕೂ ಹೋಗಬಹುದು. ಅದಕ್ಕಿಂತ ಹೆಚ್ಚಿನದು ಇನ್ನೇನಿದೆ ?

ಮಕ್ಕಳಿಗೆ ಚೆಕ್ಕಿಗೆ ರುಜು ಹಾಕುವಷ್ಟು ಅಕ್ಷರಾಭ್ಯಾಸವಿದ್ದರೆ ಸಾಕು. ಬಾಳಿ ಬದುಕಲು ಕಲಿಯಬೇಕಾದ ವಿದ್ಯೆಗಳು ಬೇಕಾದಷ್ಟಿರುವಾಗ, ಓದು ಬರಹಗಳಂತಹ ಕಾರ್ಯಗಳಲ್ಲಿ ಹುಡುಗರು ಟೈಂ ಕಳೆಯುವುದು ತುಂಬಾ ತಪ್ಪು.

ಸಿಂಧೂ ಕಾಲೇಜ್ ಇಲೆಕ್ಷನ್‌ಗೆ ನಿಂತಿದ್ದಾಳೆಂದು ತಿಳಿದು ತುಂಬಾ ಸಮಾಧಾನವಾಯಿತು. ಸಣ್ಣವಯಸ್ಸಿನಿಂದಲೂ ಧುರೀಣತ್ವದ ಗುಣಗಳನ್ನು ತೋರಿಸಿದ್ದಾಳೆ. ನಮ್ಮ ದೇಶದಲ್ಲಿ ರಾಜಕೀಯಕ್ಕೆ ಹೆಂಗಸರೇ ಸರಿ. ಜಾಯಿಂಟ್ ಫೆಮಿಲಿ ಪದ್ಧತಿಯ ಕಾಲದಿಂದಲೂ ನಮ್ಮ ಭಾರತೀಯ ನಾರಿಯರಿಗೆ ಪಾಲಿಟಿಕಿಂಗ್ ರಕ್ತಗತವಾಗಿ ಬಂದಿರುವ ಕಲೆ. ನಮ್ಮ ದೇಶದ ಸಂಪ್ರದಾಯವನ್ನು ಬಿಡದೆ, ಸಿಂಧೂ ವಂಶದ ಹೆಸರನ್ನು ಮುಂದೆ ತರುತ್ತಾಳೆಂದು ಆಶಿಸುತ್ತೇನೆ.

ಇಲ್ಲಿ ನಾನೂ, ನಿಮ್ಮ ತಂದೆ, ಆರೋಗ್ಯವಾಗಿದ್ದೇವೆ. ಅಂದಹಾಗೆ, ಪಾತ್ರೆ ತೊಳೆಯಲು 'ಕ್ವಿಕ್' ಅಂತ ಒಂದು ವಾಷಿಂಗ್ ಪೌಡರ್‌ಬಂದಿದೆ–ಜಿಡ್ಡು ಚೆನ್ನಾಗಿ ಹೋಗುತ್ತೆ ಅಂತ ನಿಮ್ಮ ತಂದೆ ಹೇಳಿದರು. ರವಿಗೂ ತಿಳಿಸು.

ಇನ್ನೇನೂ ಹೆಚ್ಚಿನ ಸಮಾಚಾರವಿಲ್ಲ,

ಇಂತೀ

ನಿನ್ನ ಪ್ರೀತಿಯ ಅಮ್ಮ

— oOo —

ಕೊಳ್ಳೀಹಳ್ಳಿ ಕಿಟ್ಟಿಪ್ಪ ಮಾಸ್ಟರು ಹೇಳಿದ ಸೆನ್ಸ್ ಆಫ್ ಪ್ರಾಯಶ್ಚಿತ್ತ ನನ್ನ ಮನಸ್ಸಿನಲ್ಲಿ ಕೊರೀತಾನೇ ಇತ್ತು. ರಾಜ ಚಂದ್ರಿ ಯಾವ ತರಹ ಕೊರೀತಾನೂ ಇಲ್ದೆ ಮುಂದೆ ತುಳೀತಾ ಇದ್ರು. ನಾನು ಮನಸ್ಸಿನಲ್ಲೆ ಕೊರ್ಕೋತಾ ನನ್ನ ಜುಬ್ಬದ ಕಿಸೆಗೆ ಕೈಹಾಕಿದೆ. ಏನೋ ಸಿಗ್ತು—ನಾಲ್ಕು ಕವಡೆಗಳು, ಕಂಬ್ಳೀಹಳ್ಳೀಲಿ ಭದ್ರಕಾಳ ಕೊಟ್ಟಿದ್ದು. ಕೈಗೆ ಬಿಸಿಯಾಗಿದ್ದು, ಪ್ರಾಯಶಃ ಇದೇ ಕವಡೆಗಳನ್ನ ಕಾರಂತರ ಮೂಕಜ್ಜಿಯ ಕೈಲಿ ಕೊಟ್ಟಿದ್ದಿದ್ರೆ—ಅವುಗಳ ಚರಿತ್ರೇನೆಲ್ಲಾ ಹೇಳಿರೋಳು। ಆದ್ರೆ ನಂಗೆ ಅದನ್ನ ಕೊಟ್ಟ ಭದ್ರಕಾಳನ ಮನಸ್ಸಿನ ಕಾವು ಮಾತ್ರ ಗೊತ್ತಿತ್ತು—ಇರಲಿ.

ಕೊಳ್ಳೀಹಳ್ಳಿ ಬಿಟ್ಟು ಹೊರಟು ನಾವು ಉಗ್ಗರ್ಸೆ ಸೇರೋ ಹೊತ್ತ್ಗೆ ಸಂಜೆಯಾಗಿತ್ತು. ಈ ಉಗ್ಗರ್ಸೆ ಅನ್ನೋ ಊರು ನಮಗೆ ಹ್ಯಾಗ್‌ಸಿಗ್ತು ಅಂತ ಹೇಳಲಾರೆ. ಅದಕ್ಕೆ ರಸ್ತೆ ಇಲ್ಲ. ಗಾಡಿದಾರಿ ಕೂಡಇಲ್ಲ. ಹಾಗಾಗಿ ಕಾಡುದಾರಿಯೂ ಇಲ್ಲ.



ಸದ್ಯ ! ನನ್ನ ಅಂಗೀಲಿ ಒಂದೂ ಕಿಸೆ ಇಲ್ಲ !!

ನಿಜವೇಳೋದಾದ್ರೆ ದಾರಿಯೇ ಇಲ್ಲ. ಹಿಂದೆ ಯಾವ್ದೋ ದಾರೀಲಿ ನಡೆದು ಹೋಗ್ತಾ ಇದ್ದಾಗ ರಾಮನಿಗೆ ಕಲ್ಲು ಸಿಕ್ಕಿದ ಹಾಗೆ ನಮಗೆ ಈ ಉಗ್ಗರ್ಸೆ ಸಿಕ್ತು. ಆದರೆ ರಾಮನ ಕಾಲಿಗೆ ಸೋಂಕಿದ ತಕ್ಷಣ ಆ ಕಲ್ಲು ಅಹಲ್ಯೆ ಆಗಿ ನಿಂತಳು. ಉಗ್ಗರ್ಸೇಲಿ ನಮ್ಮ ಸೈಕಲ್ ಚಕ್ರಕ್ಕೆ ಸಿಕ್ಕಿದ್ದು ನೆಗ್ಗಿನ ಮುಳ್ಳು. ಚಂದ್ರಿಯ ಸೈಕಲ್ ಮುಂದಿನ ಚಕ್ರ ಪಠಾರ್ ಅಂತು. ಆಮೇಲೆ ರಾಜನ ಸೈಕಲ್ ಮುಂದಿನ ಚಕ್ರ ಪಠಾರ್ ಅಂತು. ನಾನು ಅಷ್ಟು ಹೊತ್ತಿಗೆ ಇಳಿದಿದ್ದೆ.

ನಮ್ಮ ಸೈಕಲ್ ಶಬ್ದ ಕೇಳಿ ಯಾರೋ ಓಡಿಬಂದ್ರು, ಸುಮಾರು ನಲವತ್ತು ವರ್ಷ ವಯಸ್ಸಿನವ–ಒಂದು ಚಡ್ಡಿ ಮೇಲೊಂದು ಬನೀನು ಧರಿಸಿದ್ದ. ಮುಸುಕು ಬೆಳಕಿನಲ್ಲಿ ಬೇರೇನೂ ಕಾಣಲಿಲ್ಲ.

“ಇನಿಸ್ಪೇಟ್ರಾ ?” ಅಂತ ಕೇಳಿದ.


“ಅಲ್ಲ” ಅಂದ ಚಂದ್ರಿ.

“ಪ್ರೋಟ್ಪೋರಾ ?” ಅಂತ ಕೇಳಿದ.

“ಅಲ್ಲ” ಅಂದ ರಾಜ.

ಅಲ್ಲಿಗೆ ನಮ್ಮ ಪರಿಚಯ ಮುಗೀತು,

“ಇದ್ಯಾವೂರು ?” ಚಂದಿ ಕೇಳಿದ.



ಸೌಂಡ್ ಸ್ಲೀಪ್ ಅಂತ ಮೇಷ್ಟ್ರು ಹೇಳಿದ್ದು ಇದೇ
ಇರಬೇಕಲ್ವಾ ? ‘ಸೌಂಡ್’ ಮಾಡ್ತಾ ನಿದ್ದೆ ಹೋಗೋದು !!

"ಉಗ್ಗರ್ಸೀರೂ. ಎಲ್ಡ್ಮನಿ ಇರಾವು–ನಂದು ಈರೀದು" ಅಂದ.

"ಈರಿ ಯಾರು ? " ರಾಜ ಕೇಳಿದ.

"ನಮ್ಮಕ್ಕನ್ರೀ" ಅಂದ.

"ಇಲ್ಲಿ ಶಾಲೆ ಐತಾ ?" ಚಂದಿ ಕೇಳಿದ".

"ಗಂಗನಹಟ್ಟೀಲೈತೆ–ಏಳು ಮೈಲೀರಾ" ಅಂದ.

"ಗುಡಿ ?"

"ಹಳ್ಳತ್ತಾವೈತೆ–ಜುಂಜನಗುಡಿ. ವಾದಮಾವಾಸ್ಯೇನಾಗ ಚಪ್ರಾ ಹಾಕಿದ್ವಿ–ಕೊಚ್ಕೊಂಡ್ರೋತ್ರ."

ನಾವು ನಮ್ಮ ದೇಶದಲ್ಲೇ ಇದ್ದೇವೋ–ಆಫ್ರಿಕಾಕ್ಕೇ ದಾಟಿಬಿಟ್ಟಿದ್ದೇವೋ–ಗೊತ್ತಾಗಲಿಲ್ಲ, ಉಗ್ಗರ್ಸೆಯಲ್ಲಿದ್ದದು ಎರಡು ಮನೆ–ಒಂದು ಕಾಡಪ್ಪಂದು_ಇನ್ನೊಂದು ಈರಮ್ಮಂದು. ಎರಡೂ ಎದುರು ಬದುರು. ಮಧ್ಯೆ ಅಂಗಳ. ನಾವು ರಾತ್ರಿ ಬೇರೆಲ್ಲೂ ಹೋಗೋ ಹಾಗಿರಲಿಲ್ಲ.

ಕಾಡಪ್ಪನಿಗೆ ದೇವರು ಬಾವಲಿಗಳ ಕಣ್ಣುಗಳನ್ನೋ, ಪ್ರಜ್ಞೆಯನ್ನೋ ಕೊಟ್ಟಿರಬೇಕು–ಆ ಕಗ್ಗತ್ತಲಿನಲ್ಲಿ ನಮ್ಮನ್ನು ಕರ್ಕೊಂಡುಹೋಗಿ ಅವನ ಮನೆಯ ಒಂದು ಭಾಗದಲ್ಲಿ ಕೂಡಿಸಿದ. ಕತ್ತಲಲ್ಲಿದ್ದೆವು. ಒಂದು ಹಣತೆ ಹಚ್ಚಿದರು. ಉಗ್ಗರ್ಸೆಯೆಲ್ಲಾ ಬೆಳಕಾಯಿತು. ಆಗಲೇ ನನಗೆ ರವೀಂದ್ರನಾಥ ಠಾಕೂರರ ಒಂದು ಕವನ ಜ್ಞಾಪಕಕ್ಕೆ ಬಂದದ್ದು–'ಬಾನಿನಲಿ ನಾನಿಲ್ಲದಿರೆ ಯಾರೆನ್ನಕಾರ್ಯ ಮಾಡುವಿರೆಂದು ಭಾನುದೇವನು ಕೇಳೆ; ಮುತ್ತಿದ್ದ ಮೌನದಲಿ ಹಣತೆಯೊಂದದು ದೀನ ಧ್ವನಿಯಲಿ ಎಂದಿತು–ನನ್ನ ಕೈಲಾದೊಡೆ ನಾನು ಮಾಡುವೆನೆಂದು'; ಕಾಡಪ್ಪ ಹೇಳಿದ—ಅವರಿಗೆ ರಾತ್ರಿ ದೀಪದ ಉಪಯೋಗವೇ ಇಲ್ಲವಂತೆ. ಸಾಯಂಕಾಲ ಊಟ ಮುಗಿಸಿ ಕತ್ತಲಾಗೋ ಹೊತ್ತಿಗೆ ಮಲಗುತ್ತಾರೆ. ಅಕಸ್ಮಾತ್ ಸಂಭವಗಳಿಗೆ ಹೊಂಗೆಎಣ್ಣೆ ದೀಪ ಹಚ್ತಾರೆ. ಸೀಮೆಎಣ್ಣೆ ಅವರು ಕಂಡಿಲ್ಲವಂತೆ.

"ನೀವು ಉಣ್ಣೋದೇನಾ ?" ಕಾಡಪ್ಪ ಕೇಳಿದ.

ಮೌನವಾಗಿದ್ದೆವು.

"ಅಂಗಾರ ನಮ್ಮ ಹೈದನ ಕೈಲಿ ಒಂದು ಅಲ್ಸಿನಣ್ಣು ತರಿಸ್ತೇನೆ" ಅಂತ ಹೇಳಿ-"ಫಣಿಯಾ" ಅಂತ ಕೂಗಿದ.

ಮನೆಯೊಳಗಿಂದ ಸುಮಾರು ಹದಿನೈದು ವಯಸ್ಸಿನ ಒಬ್ಬ ಹುಡುಗ ಬಂದ.

"ಮಗಾ, ಅಂಗೇ ಅಗೂರಾಗಿ ಓಗಿ ಒಂದಲ್ಸನಣ್ಣು ಕಿತ್ಗೊಂಬಾ ವೇಗ–ಅಣ್ಣಾಗಿರೋದು–ದೊಂದಿ ಹಚ್ಕೊಂಡು ಓಗು" ಅಂತ ಆಜ್ಞೆ ಇತ್ತ.

ಸುಮಾರು ಅರ್ಧಘಂಟೆ ಕಾಲ ಕಳೆದಿತ್ತು. ದೊಂದಿ ದೀಪದೊಂದಿಗೆ ಫಣಿಯ ಬಂದು ನಮ್ಮ ಮುಂದೆ ಒಂದು ಹಲಸಿನ ಹಣ್ಣಿಟ್ಟ. ಮೂಗಿಗೆ ಹಿತವಾಗಿತ್ತು.

"ಈರೀನ ಕೇಳಿ ಜಗೀನ ತುಪ್ಪ ತತ್ತಾ" ಅಂದ.

ಎದುರು ಮನೆಯಿಂದ ಒಂದು ಮಣ್ಣಿನ ತಟ್ಟೆಯಲ್ಲಿ ಜೇನುತುಪ್ಪ ಬಂತು.

"ಈ ಅಣ್ಣು ನೋಡ್ರಾ–ಜುಂಜನಗುಡೀತಾವ ನಮ್ಮಜ್ಜ ನೆಟ್ಟಿದ್ದು ಮರ ದೋವು: ಈ ಸೀಮ್ಯಾಗೇ ಇಲ್ಲ ಇಂತಾ ಅಣ್ಣು" ಅನ್ನುತ್ತಾ ಕಾಡಪ್ಪ ನಮಗೆ ಹಲಸಿನಹಣ್ಣಿನ ಸಮಾರಾಧನೆ ನಡೆಸಿದ.



ಇವರ 'ಬ್ರಹ್ಮಚರ್ಯೆ'ಯ ರಹಸ್ಯ ನನಗೆ ಗೊತ್ತು,
ಯಾವ ಹುಡುಗಿಯೂ ಇವರನ್ನು ಮದುವೆಯಾಗಲು ಒಪ್ಪಿರಲಿಲ್ಲ !!

ಮಾರುದಿನ ಬೆಳಿಗ್ಗೆ ನಮಗಾಗಿ ಅವರ ನೆಲಭಾವಿಯಿಂದ ನೀರು ಸೇದಿಕೊಟ್ಟರು, ಒಂದೊಂದು ಲೋಟಾ ನೊರೆಹಾಲು ಕೊಟ್ಟರು. ಕಾಡಪ್ಪನ ಮನೆಯಲ್ಲಿ ಅವನ ಹೆಂಡತಿ ಗುಬ್ಬಮ್ಮ–ಫಣಿಯ–ಮರಿಯ ಇಬ್ಬರು ಗಂಡು ಮಕ್ಕಳು–ಗುತ್ತಿ ಒಬ್ಬ ಮಗಳು ಇದ್ದರು. ಮರಿಯನಿಗೆ ಒಂದು ಕೈ ಇರಲಿಲ್ಲ. ಕೆಲವು ತಿಂಗಳು ಹಿಂದೆ ಅವನು ಸೌದೆ ಕಡಿಯುತ್ತಿದ್ದಾಗ ಒಂದು ಚಕ್ರ ಅಂದರೆ ಒಂದು ಜಾತಿಯ ಹುಲಿ–ಅವನ ಮೇಲೆಗರಿತಂತೆ. ಮರಿಯ ಅದರ ಜೊತೆ ಸೆಣಸಾಡಿ ಅದರ ತಲೇನ ಕೊಡ್ಲಿಯಿಂದ ಒಡೆದಿದ್ದ. ತಾನು ಒಂದು ಕೈಕಳಕೊಂಡಿದ್ದ–ಒಂದು ವಾರದ ನಂತರ ನಲವತ್ತು ಮೈಲಿರೋ ಆಸ್ಪತ್ರೇಲಿ ಕೈನ ಕತ್ತರಿಸಬೇಕಾಯ್ತಂತೆ.

ಕಾಡಪ್ಪ–ಗುಬ್ಬಮ್ಮ, ಈರಮ್ಮ, ಫಣಿಯ, ಮರಿಯ, ಗುತ್ತಿ–ಇವರುಗಳಿಗೆಲ್ಲಾ ನಮಸ್ತೆ ಹೇಳಿ–ರಾಜ ಚಂದಿ ನಾನು ತಲಕಾಡು ದಾರಿಹಿಡುಕುತ್ತ ಉಗ್ಗರ್ಸೆ ಬಿಟ್ಟೆವು. ಸುಮಾರು ಮೂರು ಮೈಲಿಗಳಷ್ಟು ದೂರ ಸೈಕಲ್‌ಗಳನ್ನು ದೂಡಿ ತುಳಿದು ಒಂದು ಹರಿಯುವ ಹಳ್ಳದ ಹತ್ತಿರ ಬಂದೆವು. ಅಲ್ಲೇ ಒಂದು ಸಣ್ಣ ಗುಡಿ ಇತ್ತು–ಜುಂಜನ ಗುಡಿ. ಗುಡಿ ಹಿಂದುಗಡೆ ಎರಡು ಹಲಸಿನ ಮರಗಳೂ ಇದ್ದವು. ನಮಗೆ ಅಷ್ಟು ದೂರ ಬರಲು ಸುಮಾರು ಮುಕ್ಕಾಲು ಗಂಟೆಗಳ ಕಾಲ ಹಿಡಿದಿರಬಹುದು.



ಇವನದು ನನ್ನ ಗ್ಯಾರಂಟೀ ಓಟು !
ಚುನಾವಣೆವರೆಗಾದರೂ ಬದುಕಿಸಿರಪ್ಪಾ ಶಿವನೇ !!!

ಉಗ್ರಸೇನ ಒಂದು ಅಪರೂಪದ ಹಳ್ಳಿ. ದೇಶದ ಗಾಳಿ ಅವರಿಗೆ ಸೋಂಕಿಲ್ಲ. ಗಾಂಧಿ ಹೆಸರು ಕೇಳಿದ್ದಾರೆ. ಗಾಂಧೀಜಿ ಸತ್ತಿದ್ದು ಗೊತ್ತಿಲ್ಲ. ಆ ಗಾಂಧೀನೇ ದೆಹಲೀಲಿ ಆಳ್ತಾ ಇದ್ದಾರೇಂತ—ಎಂಟು ಮೈಲಿ ನಡೆದು ಹೋಗಿ ಅವರಿಗೇ ಓಟು ಕೊಡ್ತಾರೆ. ಅದೇ ರೀತಿ ಮಾಡ್ಬೇಕು ಅಂತ ಅವರಿಗೆ ಪ್ರತಿಓಟಿನ ಸಾರಿಯೂ ಯಾರೊ ಬಂದು ಪಾಠ ಹೇಳ್ತಾರೆ. ಉಗ್ರಸೇನಯಂತಹ ಹಳ್ಳಿಯಿರುವತನಕ ದೆಹಲಿ ಗಾಂಧಿಗೆ ಭಯವಿಲ್ಲ.

ಆದರೂ ಉಗ್ರಸೇನಯ ಜನ ನಮ್ಮಂತಹ ಬೇವಾರ್ಸಿಗಳಿಗೆ ಕಗ್ಗತ್ತಲಿನಲ್ಲಿ ಆರು ಮೈಲಿದೂರ ಕಾಲು ಓಟದಲ್ಲಿ ಓಡಿ ಆಹಾರ ಒದಗಿಸುವ ಮುಗ್ಧರು. ಹುಲಿಯನ್ನು ಹೋರಾಡಿ ಕೊಲ್ಲುವ ಧೀರರು.

"ಇಂಥಾ ಉಗ್ರಸೇನಗಳಲ್ಲಿ ಹುಡುಕಬೇಕ್ರೊ—ನಮ್ಮ ಒಲಂಪಿಕ್ಸ್ ಮೆಟೀರಿಯಲ್‌ನ" ಅಂದ ಚಂದಿ.

"ಆ ಭೂಟಾಸಿಂಗ್‌ಗೆ ಹಾಗೇ ಬರಿ" ಅಂದೆ.

—oo—

ಗಂಗಣ್ಣ ಹಾಸನದ ಪೇಟೆಬೀದಿ ಎಲ್ಲಾ ಸುತ್ತಾಡಿ ಒಳ್ಳೆ ಟೋಪಿ ಅಂಗಡಿ ಯಾವುದೆಂದು ಸಿಕ್ಕ ಸಿಕ್ಕವರೆನ್ನೆಲ್ಲಾ ವಿಚಾರಿಸಿ, ತುಂಬ ಅಗ್ಗವಾಗಿ ತುಂಬ ಬಾಳಿಕೆ ಬರುವ ಟೋಪಿ ಕೊಳ್ಳಲು ನಿರ್ಧರಿಸಿದ. ದಿನವೆಲ್ಲಾ ಅಂಗಡಿಗಳಿಗೆ ತಾಕಲಾಡಿ ಸಂಜೆಗೆ ಒಂದು ಅಂಗಡಿಹೊಕ್ಕ. ಒಂದು ಟೋಪಿ ಅವನ ಮನಸ್ಸಿಗೆ ಬಂತು. ಮೂರು ಗಂಟೆ ಚೌಕಾಶಿ ಮಾಡಿ ಅಂಗಡಿಯವನು ಮೊದಲು ಹೇಳಿದ ಬೆಲೆಯ 25% ಗೆ ಅದನ್ನು ಕೊಂಡು ತಲೆಗೆ ಹಾಕಿಕೊಂಡು ಖುಷಿಪಟ್ಟ. 'ಮತ್ತೊಮ್ಮೆ ನಮ್ಮ ಅಂಗಡೀಗೇ ಬರಬೇಕು ಸ್ವಾಮಿ,' ಎಂದು ಅಂಗಡಿಯವನು ಹೇಳಿದಾಗ 'ಆಗ಼್್ಲಿ ನೋಡೋಣ' ಎಂದು ಹೊರಟ.

ಮೂವತ್ತೆರಡು ವರ್ಷಗಳ ನಂತರ ಗಂಗಣ್ಣ ಮತ್ತೆ ಹಾಸನಕ್ಕೆ ಬಂದಾಗ ಅದೇ ಅಂಗಡಿಯನ್ನು ಹೊಕ್ಕು ಮುದುಕನಾಗಿದ್ದ ಅಂಗಡಿಯವನಿಗೆ ಹೇಳಿದ : 'ನೋಡಿದ್ರಾ, ಮತ್ತೆ ಬಂದೇ ಬಿಟ್ಟೆ ! ಇನ್ನೊಂದು ಟೋಪಿ ಇದ್ರೆ ತೋರಿಸಿ !'

No. 23 AL/84-NT III

ಶುಭಾಶಯಗಳೊಂದಿಗೆ :

ಸ್ಕೈಲಾರ್ಕ್ ಆ್ಯನ್ಸಿಲರೀಸ್ ಕಾರ್ಪೊರೇಷನ್

ಎ-188, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,

ಬೆಂಗಳೂರು-560 058